ಕರ್ನಾಟಕ ಸರ್ಕಾರ

# ಪ್ರೌಢ ಶಾಲೆಗಳಲ್ಲಿ

# ವಾರ್ಷಿಕ ಪರೀಕ್ಷಾ ಪದ್ಧತಿ

## ಮಾರ್ಗಸೂಚಿ

## 2010–2011

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ನಂ.4, 100 ಅಡಿ ವರ್ತುಲ ರಸ್ತೆ, ಹೊಸಕೆರೆ ಹಳ್ಳಿ, ಬನಶಂಕರಿ 3ನೆಯ ಹಂತ
ಬೆಂಗಳೂರು– 85.

P.H.18-1

# ಪರಿಕಲ್ಪನೆ ಮತ್ತು ಮಾರ್ಗದರ್ಶನ

ಶ್ರೀ ಡಿ.ಎಸ್. ರಾಜಣ್ಣ
ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಬೆಂಗಳೂರು.

# ಸಂಯೋಜನೆ

ಶ್ರೀಮತಿ ಎ. ಸುಭದ್ರ
ಹಿರಿಯ ಸಹಾಯಕ ನಿರ್ದೇಶಕರು
ಡಿ.ಎಸ್.ಇ.ಆರ್.ಟಿ. ಬೆಂಗಳೂರು

# ರಚನಾ ತಂಡ

1. ಶ್ರೀ ವಿ. ರಂಗಪ್ಪಯ್ಯ ಹೊಳ್ಳ
ನಿವೃತ್ತ ಕನ್ನಡ ಭಾಷಾ ಸಹಾಯಕರು
ಶ್ರೀ – ನಿವಾಸ, ಚಿತ್ರಪಾಡಿ
ಸಾಲಿಗ್ರಾಮ, ಉಡುಪಿ ಜಿಲ್ಲೆ.

2. ಶ್ರೀ ಎಂ.ಜಿ. ನರಸಿಂಹಮೂರ್ತಿ
ಹಿರಿಯ ಶಿಕ್ಷಕರು
ಎನ್.ಎಸ್.ವಿ.ಕೆ. ಪ್ರೌಢ ಶಾಲೆ
ಜಯನಗರ, ಬೆಂಗಳೂರು.

3. ಶ್ರೀ ದೊಡ್ಡಣ್ಣ. ಎಚ್. ಗದ್ದನಕೇರಿ
ಸಹಶಿಕ್ಷಕರು
ಸರ್ಕಾರಿ ಪ್ರೌಢಶಾಲೆ ತುಳಸಿಗೇರಿ
ತಾಲ್ಲೂಕು ಮತ್ತು ಜಿಲ್ಲೆ ಬಾಗಲಕೋಟೆ.

# ಪರಿವಿಡಿ

* ಮುನ್ನುಡಿ
* ರಚನಾ ತಂಡ
* ಪ್ರಸ್ತಾವನೆ
* ವಿಷಯವಾರು ಅವಧಿಗಳ ಹಂಚಿಕೆ
* ಸೇತುಬಂಧ
* ಪಾಠ ವಿಂಗಡಣೆ ಮತ್ತು ಟಿಪ್ಪಣಿ
* ಮೌಲ್ಯ ಮಾಪನ (ಪಠ್ಯ ಮತ್ತು ಸಹಪಠ್ಯ ವಿಷಯಗಳಿಗೆ ರಚನಾಹಂತ ಸಹಿತ ಪ್ರಶ್ನಪತ್ರಿಕೆ)
* ತೇರ್ಗಡೆಯ ನಿಯಮಗಳು
* ಖಾಸಗಿ ಅಭ್ಯರ್ಥಿಗಳಿಗೆ ಅವಕಾಶ
* ದಾಖಲೆಗಳು

# ಮುನ್ನುಡಿ

ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಗಳು ಅನಿವಾರ್ಯ. ಅಂತೆಯೆ ಪ್ರೌಢಶಾಲೆಯ 8–9ನೆಯ ತರಗತಿ ವಿದ್ಯಾರ್ಥಿಗಳನ್ನು 10ನೆಯ ತರಗತಿ ಪರೀಕ್ಷಾ ವಿಧಾನಗಳಿಗೆ ಪೂರಕವಾಗಿ ಸಜ್ಜುಗೊಳಿಸಲು ಸೆಮಿಸ್ಟರ್ ಪದ್ಧತಿಯ ಬದಲಾಗಿ ವಾರ್ಷಿಕ ಪರೀಕ್ಷಾ ಪದ್ಧತಿಯನ್ನು ಅನುಷ್ಠಾನಕ್ಕೆ ತರುವುದು ಸೂಕ್ತವೆಂದು ಶಿಕ್ಷಣ ತಜ್ಞರು, ಅನುಭವಿಗಳು ಪೋಷಕರು ಮತ್ತು ಶಿಕ್ಷಕರಿಂದ ಅಭಿಪ್ರಾಯ ಪಡೆದು 2010–11ರ ಶೈಕ್ಷಣಿಕ ಸಾಲಿನಿಂದ **ಸರ್ಕಾರಿ ಆದೇಶ ಸಂಖ್ಯೆ : ಇ.ಡಿ. 124 ಎಸ್.ಎಲ್.ಬಿ. 2010, ಬೆಂಗಳೂರು, ದಿನಾಂಕ 17ನೇ ಜುಲೈ 2010ರಂತೆ** 8–9ನೆಯ ತರಗತಿ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷಾ ಪದ್ಧತಿ ಜಾರಿಗೆ ತರಲಾಗಿದೆ. ವಾರ್ಷಿಕ ಪರೀಕ್ಷಾ ಪದ್ಧತಿಯ ರೂಪುರೇಷೆಗಳನ್ನು ತಿಳಿಸುವ ಸಲುವಾಗಿ ಈ ಮಾರ್ಗದರ್ಶಿ ಕಿರುಹೊತ್ತಿಗೆಯನ್ನು ಹೊರತರಲಾಗುತ್ತಿದೆ. ವಿಷಯವಾರು ಅವಧಿಗಳ ಹಂಚಿಕೆ, ಪಾಠ ವಿಂಗಡಣೆ ಮತ್ತು ಟಿಪ್ಪಣಿ, ಮೌಲ್ಯಮಾಪನ, ಫಲಿತಾಂಶ ಇತ್ಯಾದಿ ಮಾಹಿತಿಯನ್ನು ಇದರಲ್ಲಿ ಅಳವಡಿಸಲಾಗಿದೆ. ಜೊತೆಗೆ ಶಾಲೆಗಳಲ್ಲಿ ಇಟ್ಟುಕೊಳ್ಳಬೇಕಾದ ದಾಖಲೆಗಳ ವಿವರಗಳನ್ನು ನೀಡಲಾಗಿದೆ.

ಮೌಲ್ಯಮಾಪನಕ್ಕೆ ಸಂಬಂಧಿಸಿದ ಪ್ರಶ್ನಪತ್ರಿಕೆಯ ವಿನ್ಯಾಸವನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಮುದ್ರಿಸಿರುವ ಮಾರ್ಗಸೂಚಿಯನ್ವಯ ತಯಾರಿಸಿ ಈ ಹೊತ್ತಿಗೆಯಲ್ಲಿ ನೀಡಲಾಗಿದೆ.

ಈ ವಿಚಾರದಲ್ಲಿ ಅನುಭವವುಳ್ಳ ಸಂಪನ್ಮೂಲ ಶಿಕ್ಷಕರನ್ನು ಆಹ್ವಾನಿಸಿ ಸಾಹಿತ್ಯವನ್ನು ಸಿದ್ಧಪಡಿಸಲಾಗಿದೆ. ಶಿಕ್ಷಕರಿಗೆ ಸಹಕಾರಿಯಾಗುವ ಈ ಹೊತ್ತಿಗೆಯನ್ನು ಹೊರತರಲು ಸಹಕರಿಸಿದ ಸಂಪನ್ಮೂಲ ಶಿಕ್ಷಕರಿಗೆ ಅಭಿನಂದನೆಗಳು.

**ದಿನಾಂಕ :** ಅಕ್ಟೋಬರ್, 2010

**ಸ್ಥಳ :** ಬೆಂಗಳೂರು

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ.
ಬೆಂಗಳೂರು.

PH-18-2

# ಕರ್ನಾಟಕ ಸರಕಾರದ ನಡಾವಳಿಗಳು

ವಿಷಯ : ಸೆಮಿಸ್ಟರ್ ಪದ್ಧತಿಯ ಬದಲಿಗೆ ವಾರ್ಷಿಕ ಪರೀಕ್ಷಾ ಪದ್ಧತಿ ಅಳವಡಿಸುವ ಬಗ್ಗೆ.

**ಓದಲಾಗಿದೆ** : 1. ಸರ್ಕಾರದ ಆದೇಶ ಸಂಖ್ಯೆ ಇಡಿ 24 ಡಿ.ಜಿ.ಓ. 2004, ದಿನಾಂಕ 16.02.2004

2. ಸರ್ಕಾರದ ಆದೇಶ ಸಂಖ್ಯೆ ಇಡಿ 08 ಡಿ.ಜಿ.ಓ 2007, ದಿನಾಂಕ 30.06.2007

3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ದಿನಾಂಕ 05.07.2010ರ ಪ್ರಸ್ತಾವನೆ

*********

## ಪ್ರಸ್ತಾವನೆ :-

ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿನ ಮಕ್ಕಳ ದೈಹಿಕ, ಮಾನಸಿಕ ಹಾಗೂ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಚಿಂತಿಸಿ, ವಾರ್ಷಿಕ ಪರೀಕ್ಷೆಗಳಿಂದ ಮಕ್ಕಳ ಮೇಲೆ ಹೆಚ್ಚಿನ ಜವಾಬ್ದಾರಿ ಹಾಗೂ ಜ್ಞಾಪಕ ಶಕ್ತಿಯ ಮೇಲೆ ಪರಿಣಾಮ ಬೀರುವುದನ್ನು ಪರಿಶೀಲಿಸಿ, ಮೇಲೆ(1) ರಲ್ಲಿ ಓದಲಾದ ದಿನಾಂಕ 16.02.2004ರ ಆದೇಶದಲ್ಲಿ 2004-05ನೆಯ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ತ್ರೈಮಾಸಿಕ ಪರೀಕ್ಷಾ ಪದ್ಧತಿಯನ್ನು ಜಾರಿಗೆ ತರಲಾಗಿತ್ತು. ತದನಂತರ ಶಿಕ್ಷಣ ಕ್ಷೇತ್ರದ ಮಾನ್ಯ ವಿಧಾನ ಪರಿಷತ್ ಸದಸ್ಯರೊಂದಿಗೆ ಹಾಗೂ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ, ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು, ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ, ತ್ರೈಮಾಸಿಕ ಪರೀಕ್ಷಾ ಪದ್ಧತಿಯ ಸಾಧಕ-ಬಾಧಕಗಳ ಬಗ್ಗೆ ವರದಿಯನ್ನು ಪಡೆಯಲಾಗಿದೆ. ಈ ವರದಿಯ ಅಭಿಪ್ರಾಯದಂತೆ ಮೇಲೆ (2)ರಲ್ಲಿ ಓದಲಾದ ದಿನಾಂಕ 30.06.2007ರ ಸರ್ಕಾರದ ಆದೇಶದಲ್ಲಿ ತ್ರೈಮಾಸಿಕ ಪರೀಕ್ಷಾ ಪದ್ಧತಿಯನ್ನು ರದ್ದುಪಡಿಸಿ, 5ನೆಯ ತರಗತಿಯಿಂದ 9ನೆಯ ತರಗತಿಯವರೆಗೆ ಅರ್ಧವಾರ್ಷಿಕ (ಸೆಮಿಸ್ಟರ್) ಪರೀಕ್ಷಾ ಪದ್ಧತಿಯನ್ನು 2007-08ನೆಯ ಸಾಲಿನಿಂದ ಜಾರಿಗೆ ತರಲಾಗಿದೆ.

ಪ್ರೌಢಶಾಲಾ ಹಂತದಲ್ಲಿನ ವಿದ್ಯಾರ್ಥಿಗಳಿಗೆ 8 ಮತ್ತು 9ನೆಯ ತರಗತಿಗಳಲ್ಲಿ ಸೆಮಿಸ್ಟರ್ ಪದ್ಧತಿ ಇದ್ದು, ಈಗಿನ 10ನೆಯ ತರಗತಿಯ ಪರೀಕ್ಷಾ ಪದ್ಧತಿಗೆ ಪೂರಕವಾಗಿರುವುದಿಲ್ಲ. ಇದರಿಂದ ಬಹುತೇಕ ವಿದ್ಯಾರ್ಥಿಗಳು 10ನೆಯ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ಸಾಧನೆಯನ್ನು ಮಾಡದಿರುವುದು ಕಂಡು ಬಂದಿರುತ್ತದೆ. ಎಸ್.ಎಸ್.ಎಲ್.ಸಿ. ಪರೀಕ್ಷೆಗಾಗಿ 8 ನೆಯ ತರಗತಿಯಿಂದಲೇ ಮಕ್ಕಳನ್ನು ಸಿದ್ಧಗೊಳಿಸಲು ಅಥವಾ ತರಬೇತುಗೊಳಿಸಲು ಈಗಿನ ಸೆಮಿಸ್ಟರ್ ಪದ್ಧತಿಯ ಬದಲಾಗಿ ವಾರ್ಷಿಕ ಪರೀಕ್ಷಾ ಪದ್ಧತಿಯನ್ನು ಅಳವಡಿಸುವ ಬಗ್ಗೆ ಪಾಲಕರು ಹಾಗೂ ಶಿಕ್ಷಕ ಸಮುದಾಯದಿಂದ ಒತ್ತಾಯ ಕಂಡು ಬಂದ ಹಿನ್ನೆಲೆಯಲ್ಲಿ 10ನೆಯ ತರಗತಿಯ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಸಾಧನೆಯನ್ನು ಮಾಡಲು ಅನುಕೂಲವಾಗುವಂತೆ, 8 ಮತ್ತು 9ನೆಯ ತರಗತಿಗಳಲ್ಲಿಯೂ ಸಹ ವಾರ್ಷಿಕ ಪರೀಕ್ಷೆಯನ್ನು ಜಾರಿಗೆ ತರುವುದು ಅತ್ಯಾವಶ್ಯಕವೆಂದು ಪರಿಗಣಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ ಇಡಿ 124 ಎಸ್.ಎಲ್.ಬಿ. 2010, ಬೆಂಗಳೂರು ದಿನಾಂಕ 17ನೇ ಜುಲೈ 2010.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 8 ಮತ್ತು 9ನೆಯ ತರಗತಿಗಳಿಗೆ ಸರ್ಕಾರದ ಆದೇಶ ಸಂಖ್ಯೆ ಇಡಿ 08 ಡಿಜಿಓ 2007, ದಿನಾಂಕ 30.06.2007ರಲ್ಲಿ 2007–08ನೆಯ ಶೈಕ್ಷಣಿಕ ಸಾಲಿನಿಂದ ಜಾರಿಗೆ ತಂದಿದ್ದ ಅರ್ಧವಾರ್ಷಿಕ (ಸೆಮಿಸ್ಟರ್) ಪರೀಕ್ಷಾ ಪದ್ಧತಿಯ ಬದಲಾಗಿ 2010–11ನೆಯ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ವಾರ್ಷಿಕ ಪರೀಕ್ಷಾ ಪದ್ಧತಿಯನ್ನು ಈ ಕೆಳಕಂಡ ಕಿರುಪರೀಕ್ಷೆಗಳು ಹಾಗೂ ಪರೀಕ್ಷಾ ವಿಧಾನಗಳೊಂದಿಗೆ ಜಾರಿಗೊಳಿಸಿ ಆದೇಶಿಸಿದೆ.

* ಜುಲೈ ಕೊನೆಯ ವಾರದಲ್ಲಿ 25 ಅಂಕಗಳಿಗೆ ಒಂದು ಕಿರುಪರೀಕ್ಷೆ
* ಆಗಸ್ಟ್ ಕೊನೆಯ ವಾರದಲ್ಲಿ 25 ಅಂಕಗಳಿಗೆ ಎರಡನೆಯ ಕಿರುಪರೀಕ್ಷೆ
* ಅರ್ಧವಾರ್ಷಿಕ ಪರೀಕ್ಷೆ 100 ಅಂಕಗಳಿಗೆ ಮಧ್ಯಂತರ ರಜೆಗೆ ಮೊದಲು.
* ನವೆಂಬರ್ ಕೊನೆಯ ವಾರದಲ್ಲಿ 25 ಅಂಕಗಳಿಗೆ ಮೂರನೆಯ ಕಿರು ಪರೀಕ್ಷೆ
* ಜನವರಿ ಮೊದಲ ವಾರದಲ್ಲಿ 25 ಅಂಕಗಳಿಗೆ ನಾಲ್ಕನೆಯ ಕಿರುಪರೀಕ್ಷೆ
* ಮಾರ್ಚ್ ತಿಂಗಳಿನಲ್ಲಿ 100 ಅಂಕಗಳಿಗೆ ವಾರ್ಷಿಕ ಪರೀಕ್ಷೆ.

ಸೆಮಿಸ್ಟರ್ ಪದ್ಧತಿ ಅಳವಡಿಸುವ ಮೊದಲು ಜಾರಿಯಲ್ಲಿದ್ದ ಇಲಾಖೆಯು ನಿಗದಿಪಡಿಸಿದ್ದ ಮೌಲ್ಯಮಾಪನ ಹಾಗೂ ತೇರ್ಗಡೆ ನಿಯಮಗಳು ಅನ್ವಯಿಸುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಟಿ. ಜಯರಾಂ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಪ್ರೌಢ).

# ವಿಷಯವಾರು ಅವಧಿಗಳ ಹಂಚಿಕೆ

ತರಗತಿಯೊಂದಕ್ಕೆ ಒಂದು ವಾರಕ್ಕೆ 45 ನಿಮಿಷಗಳ 40 ಅವಧಿಗಳಿದ್ದು ಅದರಂತೆ ವಿಷಯವಾರು ಅವಧಿಗಳನ್ನು ಈ ಕೆಳಗಿನಂತೆ ಹಂಚಲಾಗಿದೆ.

| ಕ್ರಮಸಂಖ್ಯೆ | ವಿಷಯಗಳು | ಅವಧಿಗಳು |
|---|---|---|
| 1 | ಪ್ರಥಮ ಭಾಷೆ | 6 |
| 2 | ದ್ವಿತೀಯ ಭಾಷೆ | 5 |
| 3 | ತೃತೀಯ ಭಾಷೆ | 4 |
| 4 | ಗಣಿತ | 6 |
| 5 | ವಿಜ್ಞಾನ | 6 |
| 6 | ಸಮಾಜ ವಿಜ್ಞಾನ | 6 |
| 7 | ದೈಹಿಕ ಶಿಕ್ಷಣ | 4 |
| 8 | ಕಾರ್ಯಾನುಭವ / ಕಲೆ ಮತ್ತು ಸೃಜನಾತ್ಮಕ ಅಭಿವ್ಯಕ್ತಿ | 3 |

# ಸೇತುಬಂಧ

ಹಿಂದಿನ ತರಗತಿಯಿಂದ ಉತ್ತೀರ್ಣನಾಗಿ ಬಂದ ವಿದ್ಯಾರ್ಥಿಯಲ್ಲಿ ಈಗಿನ ತರಗತಿಯ ಕಲಿಕೆಗೆ ಬೇಕಾದ ಕನಿಷ್ಠ ಸಾಮರ್ಥ್ಯ / ಕಲಿಕಾಂಶಗಳು ಎಷ್ಟರಮಟ್ಟಿಗೆ ಇವೆ ಎಂಬುದನ್ನು ದೃಢಪಡಿಸಿಕೊಳ್ಳುವ ಚಟುವಟಿಕೆಯ ಜೊತೆಗೆ ಈಗ ಕಲಿಯುತ್ತಿರುವ ತರಗತಿಗೆ ಬೇಕಾದ ಸಾಮರ್ಥ್ಯ / ಕಲಿಕಾಂಶಗಳನ್ನು ಗಳಿಸಲು ವಿದ್ಯಾರ್ಥಿಯನ್ನು ಸಿದ್ಧಗೊಳಿಸುವ ಚಟುವಟಿಕೆಯೇ ಸೇತುಬಂಧ ಕಾರ್ಯಕ್ರಮ.

ಹಿಂದಿನ ತರಗತಿಯಲ್ಲಿ ವಿದ್ಯಾರ್ಥಿಯ ಕಲಿಕೆ ಪ್ರಭುತ್ವಮಟ್ಟದಲ್ಲಿ ಆಗಿರದಿದ್ದರೆ ಪ್ರಸಕ್ತ ತರಗತಿಯಲ್ಲಿ ತೊಡಗಿಸಿಕೊಳ್ಳುವುದು ಕಷ್ಟಕರ. ಉದಾಹರಣೆಗೆ ಅಕ್ಷರ ಜ್ಞಾನವಿಲ್ಲದ ವಿದ್ಯಾರ್ಥಿ ಓದುವ, ಬರೆಯುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಕಷ್ಟವಾಗುತ್ತದೆ. ಗಣಿತದ ಮೂಲ ಕ್ರಿಯೆಗಳನ್ನು ಪ್ರಭುತ್ವಮಟ್ಟದಲ್ಲಿ ಕಲಿಯದಿರುವ ವಿದ್ಯಾರ್ಥಿ ಮುಂದಿನ ಹಂತಗಳನ್ನು ಯಶಸ್ವಿಯಾಗಿ ಕಲಿಯಲಾರನು. ಆ ದಿಸೆಯಲ್ಲಿ ಸೇತುಬಂಧ ಕಾರ್ಯಕ್ರಮವು ವಿದ್ಯಾರ್ಥಿಗೆ ತಾನು ಕಲಿಯುತ್ತಿರುವ ತರಗತಿಗೆ ಬೇಕಾದ ಕನಿಷ್ಠ ಸಾಮರ್ಥ್ಯ / ಕಲಿಕಾಂಶಗಳನ್ನು ಗಳಿಸಲು ಸಹಕಾರಿಯಾಗುತ್ತದೆ.

ಈ ಸೇತುಬಂಧ ಕಾರ್ಯಕ್ರಮವು ನೈದಾನಿಕ ಪರೀಕ್ಷೆ, ದೋಷನಿದಾನ, ಪರಿಹಾರ ಬೋಧನೆ ಮತ್ತು ಸಾಫಲ್ಯ ಪರೀಕ್ಷೆ ಎಂಬ ನಾಲ್ಕು ಹಂತಗಳನ್ನು ಒಳಗೊಂಡಿರುತ್ತದೆ.

## ನೈದಾನಿಕ ಪರೀಕ್ಷೆ

ವಿದ್ಯಾರ್ಥಿಯು ಪ್ರಸಕ್ತ ಸಾಲಿನಲ್ಲಿ ಓದುತ್ತಿರುವ ತರಗತಿಯ ಕಲಿಕೆಗೆ ಅವಶ್ಯವಾಗಿ ಬೇಕಾದ ಸಾಮರ್ಥ್ಯ / ಕಲಿಕಾಂಶಗಳು ಆತನಲ್ಲಿ ಎಷ್ಟರಮಟ್ಟಿಗೆ ಇವೆ ಎಂಬುದನ್ನು ಪತ್ತೆ ಹಚ್ಚುವ ಹಂತವಿದು.

PH.18.3

## ದೋಷ ನಿದಾನ

ಉತ್ತರಗಳ ವಿಶ್ಲೇಷಣೆಯ ಆಧಾರದಿಂದ ದೋಷ ನಿದಾನ ಮಾಡುವುದಕ್ಕೆ ಸಾಧ್ಯವಿದೆ. ಯಾವ ವಿದ್ಯಾರ್ಥಿಯು ಯಾವ ಸಾಮರ್ಥ್ಯ/ ಕಲಿಕಾಂಶಗಳನ್ನು ಗಳಿಸಿದ್ದಾನೆ / ಗಳಿಸಿಲ್ಲ ಎಂಬ ವಿಶ್ಲೇಷಣೆ ಮಾಡಿದ ಬಳಿಕ ಪ್ರತಿ ವಿದ್ಯಾರ್ಥಿಯ ಕಲಿಕಾ ದೋಷಗಳನ್ನು ಅಥವಾ ಕಲಿಕೆಯಲ್ಲಿರುವ ಕೊರತೆಗಳನ್ನು ಪತ್ತೆ ಹಚ್ಚುವ ಹಂತವೇ ದೋಷ ನಿದಾನ.

## ಪರಿಹಾರ ಬೋಧನೆ

ದೋಷ ನಿದಾನದಲ್ಲಿ ದೊರಕಿದ ಮಾಹಿತಿಗನುಸಾರವಾಗಿ ವಿದ್ಯಾರ್ಥಿಗಳಲ್ಲಿರುವ ಕಲಿಕಾ ಕೊರತೆಯನ್ನು ನೀಗಿಸುವ ಪ್ರಕ್ರಿಯೆಯೇ ಪರಿಹಾರ ಬೋಧನೆ.

ಈ ಪರಿಹಾರ ಬೋಧನೆ ವಿದ್ಯಾರ್ಥಿಗಳ ಕಲಿಕಾ ಕೊರತೆಯನ್ನು ನಿವಾರಿಸುವ ಮಟ್ಟಿಗೆ ಸೀಮಿತವಾಗಿರುತ್ತದೆಯೇ ಹೊರತು ಇಡೀ ವಿಷಯವನ್ನು ಮರುಬೋಧನೆ ಮಾಡಬೇಕಾಗಿಲ್ಲ. ಸಾಮರ್ಥ್ಯ / ಕಲಿಕಾಂಶವನ್ನು ಗಳಿಸಿರುವ ವಿದ್ಯಾರ್ಥಿಗಳನ್ನು ಈ ಹಂತದಲ್ಲಿ ಬಳಸಿಕೊಳ್ಳಬಹುದು. ಇದರಿಂದ ತರಗತಿಯ ನಿರ್ವಹಣೆಯೂ ಸುಲಭವಾಗುತ್ತದೆ. ತಮ್ಮ ಸಹಪಾಠಿಗಳನ್ನು ಕಲಿಕಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ವಿದ್ಯಾರ್ಥಿಗಳ ಕಲಿಕೆಯೂ ಇದರಿಂದ ಪ್ರಭುತ್ವ ಪಡೆಯುತ್ತದೆ. ಈ ಚಟುವಟಿಕೆಗಳಿಗೆ ಕಲಿಕಾಕೊರತೆ ಇಲ್ಲದ ವಿದ್ಯಾರ್ಥಿಗಳನ್ನು ಬಳಸಿಕೊಳ್ಳದಿದ್ದರೆ ಅವರಿಗೆ ಹೆಚ್ಚುವರಿ ಚಟುವಟಿಕೆಗಳನ್ನು ನೀಡಿ ಅವರನ್ನು ಕಲಿಕಾ ಪ್ರಕ್ರಿಯೆಯಲ್ಲಿ ಮುಂದೆ ಸಾಗುವಂತೆ ಮಾಡಬಹುದು.

## ಸಾಫಲ್ಯ ಪರೀಕ್ಷೆ

ವಿದ್ಯಾರ್ಥಿಗಳ ಕಲಿಕಾ ಕೊರತೆಗಳ ನಿವಾರಣೆಗೆ ಮಾಡಿದ ಪರಿಹಾರ ಬೋಧನೆ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಎಂಬುದನ್ನು ತಿಳಿಯುವ ಹಂತವೇ ಸಾಫಲ್ಯ ಪರೀಕ್ಷೆ (ಹೆಚ್ಚಿನ ವಿವರಗಳಿಗೆ ಸೌರಭ 2007ನ್ನು ಗಮನಿಸಿ)

# ಪಾಠ ವಿಂಗಡಣೆ ಮತ್ತು ಟಿಪ್ಪಣಿ

### 1. ಪಾಠದ ವಿಂಗಡಣೆ :

8 ರಿಂದ 10ನೆಯ ತರಗತಿಗಳ ಪಾಠಗಳ ವಿಂಗಡಣೆಯನ್ನು ಈ ರೀತಿ ಮಾಡಿಕೊಳ್ಳಬೇಕು.

1. ಜೂನ್ ತಿಂಗಳ ಮೊದಲ ಎರಡು ವಾರಗಳನ್ನು ಸೇತುಬಂಧ ಕಾರ್ಯಕ್ರಮಕ್ಕೆ ಮೀಸಲಿಡಬೇಕು.
2. ಪ್ರಥಮ ಮತ್ತು ದ್ವಿತೀಯ ಟರ್ಮ್‌ಗಳಲ್ಲಿ ದೊರೆಯುವ ಬೋಧನಾ ಅವಧಿಗಳನ್ನು ಪರಿಗಣಿಸಿ (ಸೇತುಬಂಧ ಅವಧಿಯನ್ನು ಬಿಟ್ಟು) ಪಾಠಗಳನ್ನು ಇಲ್ಲಿ ಕೊಟ್ಟಿರುವ ಸೂಚನೆಯಂತೆ ಟರ್ಮ್‌ವಾರು ಹಂಚಿಕೆ ಮಾಡಿಕೊಳ್ಳಬೇಕು.
3. ಭಾಷಾ ಪಾಠಗಳಲ್ಲಿ ಗದ್ಯ ಪದ್ಯಗಳಿಗೆ ಎರಡೂ ಟರ್ಮ್‌ಗಳಲ್ಲಿ ಸಮಾನ ಪ್ರಾತಿನಿಧ್ಯ ನೀಡಬೇಕು.
4. ಗಣಿತದಲ್ಲಿ ಅಂಕಗಣಿತ, ಬೀಜಗಣಿತ ಮತ್ತು ರೇಖಾಗಣಿತಗಳ ಘಟಕಗಳಿಗೆ ಎರಡೂ ಟರ್ಮ್‌ಗಳಲ್ಲಿ ಸಮಾನ ಪ್ರಾತಿನಿಧ್ಯ ನೀಡಬೇಕು.
5. ವಿಜ್ಞಾನದಲ್ಲಿ ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ ಘಟಕಗಳಿಗೆ ಎರಡೂ ಟರ್ಮ್‌ಗಳಲ್ಲಿ ಸಮಾನ ಪ್ರಾತಿನಿಧ್ಯ ದೊರೆಯುವಂತೆ ವಿಂಗಡಿಸಿಕೊಳ್ಳಬೇಕು.

6. ಸಮಾಜ ವಿಜ್ಞಾನದಲ್ಲಿ ಇತಿಹಾಸ, ಭೂಗೋಳ ಶಾಸ್ತ್ರ, ಪೌರನೀತಿ ಮತ್ತು ಅರ್ಥಶಾಸ್ತ್ರದ ಅಧ್ಯಾಯಗಳಿಗೆ ಎರಡೂ ಟರ್ಮ್‌ಗಳಲ್ಲಿ ಸಮಾನ ಪ್ರಾತಿನಿಧ್ಯ ನೀಡಬೇಕು.
7. ಪಾಠ ವಿಂಗಡಣೆ ಮಾಡುವಾಗ ಯಾವುದೇ ಕಾರಣಕ್ಕೂ ಯಾವ ಪಾಠವನ್ನೂ ಬಿಡಕೂಡದು.
8. ಟರ್ಮ್‌ವಾರು ಹಂಚಿಕೆ ಮಾಡಿದ ಪಾಠಗಳನ್ನು ಮಾಸಿಕವಾರು ವಿಂಗಡಣೆ ಮಾಡಬೇಕು. ಹೀಗೆ ಮಾಡುವಾಗ ಪಾಠಗಳ ವ್ಯಾಪ್ತಿ ಮತ್ತು ಕ್ಲಿಷ್ಟತೆಗಳನ್ನು ಗಮನಿಸಬೇಕು.
9. ಅನಿರೀಕ್ಷಿತ ಕಾರಣಗಳಿಂದಾಗಿ ಹಂಚಿಕೆಯಾದ ಪಾಠಗಳು ಮೊದಲ ಟರ್ಮ್‌ನಲ್ಲಿ ಪೂರ್ಣಗೊಳ್ಳದೆ ಹೋದರೆ ಎರಡನೆಯ ಟರ್ಮ್‌ನ ಪ್ರಾರಂಭದಲ್ಲಿ ಪೂರ್ಣಗೊಳಿಸಿ ಎರಡನೆಯ ಟರ್ಮ್‌ನ ಪಾಠ ಬೋಧನೆಯನ್ನು ಪ್ರಾರಂಭಿಸಬೇಕು.

(ಸಂಬಂಧಪಟ್ಟ ನಮೂನೆಯನ್ನು ದಾಖಲೆಗಳ ಪಟ್ಟಿಯಲ್ಲಿ ನೀಡಲಾಗಿದೆ).

**ಪಾಠದ ಟಿಪ್ಪಣಿ :**

ಭಾಷಾ ಪಾಠದಲ್ಲಿ ಪ್ರತಿಯೊಂದು ಪಾಠಕ್ಕೂ 'ಕೋರ್' ವಿಷಯಗಳಲ್ಲಿ ಪ್ರತಿಯೊಂದು ಘಟಕಕ್ಕೂ ಪಾಠಯೋಜನೆಯನ್ನು ಸಿದ್ಧಪಡಿಸಬೇಕು.

(ಸಂಬಂಧಿತ ನಮೂನೆಯನ್ನು ದಾಖಲೆಗಳ ಪಟ್ಟಿಯಲ್ಲಿ ನೀಡಲಾಗಿದೆ).

# ಮೌಲ್ಯಮಾಪನ

ಒಂದು ಶೈಕ್ಷಣಿಕ ವರ್ಷದಲ್ಲಿ ನಾಲ್ಕು ಕಿರುಪರೀಕ್ಷೆಗಳನ್ನು, ಒಂದು ಅರ್ಧವಾರ್ಷಿಕ ಪರೀಕ್ಷೆ ಹಾಗೂ ವರ್ಷಾಂತ್ಯದಲ್ಲಿ ವಾರ್ಷಿಕ ಪರೀಕ್ಷೆ ನಡೆಸುವುದು ಕಡ್ಡಾಯ. ಈ ಆರೂ ಪರೀಕ್ಷೆಗಳು ಲಿಖಿತ ರೂಪದಲ್ಲಿರಬೇಕು. ಮೊದಲನೆಯ ಟರ್ಮಿನಲ್ಲಿ ಎರಡು ಮತ್ತು ಎರಡನೆಯ ಟರ್ಮಿನಲ್ಲಿ ಎರಡು ಕಿರುಪರೀಕ್ಷೆಗಳನ್ನು ನಡೆಸತಕ್ಕದ್ದು. (ದಿನಾಂಕ 17.07.2010ರ ಸರಕಾರಿ ಆದೇಶದಲ್ಲಿ ನಮೂದಿಸಿದಂತೆ) ಶಿಕ್ಷಕರು ಪಾಠ ಬೋಧನೆಯ ಬಳಿಕ ಘಟಕ ಪರೀಕ್ಷೆಗಳನ್ನು ನಡೆಸಬೇಕು.

ಪ್ರತಿಯೊಂದು ಕಿರುಪರೀಕ್ಷೆಯು 45 ನಿಮಿಷಗಳ ಅವಧಿಗೆ ಸೀಮಿತವಾಗಿದ್ದು 25 ಅಂಕಗಳ ಪ್ರಶ್ನೆಗಳನ್ನು ಹೊಂದಿರುತ್ತದೆ. ಇವುಗಳಲ್ಲಿ ಶೇ. 50 ವಸ್ತುನಿಷ್ಠ ಶೇ. 50 ಕಿರುಉತ್ತರ ಪ್ರಶ್ನೆಗಳು ಇರಬೇಕು. ಅರ್ಧವಾರ್ಷಿಕ ಮತ್ತು ವಾರ್ಷಿಕ ಪರೀಕ್ಷೆಯು ವಿಷಯವಾರು ಈ ರೀತಿ ಇರುತ್ತದೆ.

| | | |
|---|---|---|
| ಪ್ರಥಮ ಭಾಷೆ | 125 ಅಂಕಗಳು | 3 ಗಂಟೆಯ ಅವಧಿ |
| ದ್ವಿತೀಯ ಭಾಷೆ | 100 ಅಂಕಗಳು | 2½ ಗಂಟೆಯ ಅವಧಿ |
| ತೃತೀಯ ಭಾಷೆ | 100 ಅಂಕಗಳು | 2½ ಗಂಟೆಯ ಅವಧಿ |
| ಗಣಿತ | 100 ಅಂಕಗಳು | 3 ಗಂಟೆಯ ಅವಧಿ |
| ವಿಜ್ಞಾನ | 100 ಅಂಕಗಳು | 3 ಗಂಟೆಯ ಅವದಿ |
| ಸಮಾಜ ವಿಜ್ಞಾನ | 100 ಅಂಕಗಳು | 3 ಗಂಟೆಯ ಅವದಿ |
| ದೈಹಿಕ ಶಿಕ್ಷಣ | 40 ಅಂಕಗಳು (ಲಿಖಿತ) | 1½ ಗಂಟೆಯ ಅವಧಿ |
| | 60 ಅಂಕಗಳು (ಪ್ರಾಯೋಗಿಕ) | ಅವಧಿಗಳನ್ನು ಶಿಕ್ಷಕರೇ ನಿಗದಿಪಡಿಸಿಕೊಳ್ಳಬೇಕು. |

**ವಿ.ಸೂ:** ಕಿರುಪರೀಕ್ಷೆಗಳ ಅಂಕಗಳನ್ನು ಪ್ರಗತಿಪತ್ರ ಮತ್ತು ಕ್ರೋಢೀಕೃತ ಅಂಕವಹಿಯಲ್ಲಿ ನಮೂದಿಸುವಾಗ ಅರ್ಧವಾರ್ಷಿಕ ಮತ್ತು ವಾರ್ಷಿಕ ಪರೀಕ್ಷೆಗಳಿಗೆ ನಿಗದಿಪಡಿಸಿದ ಗರಿಷ್ಠ ಅಂಕಗಳಿಗೆ ಪರಿವರ್ತಿಸಿ ನಮೂದಿಸಬೇಕು.

# ಪ್ರಶ್ನ ಪತ್ರಿಕೆಯ ರಚನಾ ಹಂತಗಳು

## (ಪಠ್ಯವಿಷಯಕ್ಕೆ ಸಂಬಂಧಿಸಿದಂತೆ)

8 ಮತ್ತು 9ನೆಯ ತರಗತಿಗಳ ವಿದ್ಯಾರ್ಥಿಗಳನ್ನು 10ನೆಯ ತರಗತಿಯ ಅಧ್ಯಯನಕ್ಕೆ ಸಿದ್ಧಗೊಳಿಸಬೇಕಾಗಿರುವುದರಿಂದ ಪ್ರಶ್ನಪತ್ರಿಕೆಯ ರಚನಾ ಹಂತಗಳು ಎಸ್ಸೆಸ್ಸೆಲ್ಸಿ ಮಾದರಿಯಲ್ಲೇ ಇರಬೇಕಾದ ಅಗತ್ಯವಿದೆ. ಹಾಗಾಗಿ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯವರು ಪ್ರಸ್ತುತ ಜಾರಿಗೆ ತಂದಿರುವ ಮಾದರಿಯನ್ನು ಇಲ್ಲಿ ನೀಡಲಾಗಿದೆ. ಇದರ ಆಧಾರದಿಂದ **ಆಯಾ ವಿಷಯ ಬೋಧಕರೇ** ನೀಲನಕ್ಷೆಯೊಂದಿಗೆ ಪ್ರಶ್ನಪತ್ರಿಕೆಯನ್ನು ತಯಾರಿಸಿ ಅರ್ಧವಾರ್ಷಿಕ ಮತ್ತು ವಾರ್ಷಿಕ ಪರೀಕ್ಷೆಗಳನ್ನು ನಡೆಸಬೇಕು. ಕಿರುಪರೀಕ್ಷೆಗಳಿಗೆ ಹಿಂದಿನ ಪುಟದಲ್ಲಿ ತಿಳಿಸಿದಂತೆ ಶಿಕ್ಷಕರೇ ಪ್ರಶ್ನಪತ್ರಿಕೆಯನ್ನು ತಯಾರಿಸಿಕೊಳ್ಳಬೇಕು.

## ವಿಷಯವಾರು ಪ್ರಶ್ನಪತ್ರಿಕೆಯ ರಚನಾ ಹಂತಗಳು

ಅ. ಪ್ರಥಮ ಭಾಷೆ

ಆ. ದ್ವಿತೀಯ ಭಾಷೆ

ಇ. ತೃತೀಯ ಭಾಷೆ

ಈ. ಗಣಿತ

ಉ. ವಿಜ್ಞಾನ

ಊ. ಸಮಾಜ ವಿಜ್ಞಾನ

ಋ. ದೈಹಿಕ ಶಿಕ್ಷಣ (ಈ ವಿಷಯಕ್ಕೆ ಸಂಬಂಧಪಟ್ಟ ಮೌಲ್ಯಮಾಪನ ಸಂಚಿಯಲ್ಲಿ ಸೂಚಿಸಿದಂತೆ ಪ್ರಶ್ನಪತ್ರಿಕೆಯನ್ನು ರಚಿಸಿಕೊಳ್ಳಬೇಕು.)

## ಅ. ಪ್ರಥಮ ಭಾಷೆ

### 1. ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

| ಉದ್ದಿಷ್ಟಗಳು | ಪ್ರತಿಶತ ಅಂಕಗಳು | ದತ್ತ ಅಂಕಗಳು |
|---|---|---|
| ಜ್ಞಾನ | 29 | 35 |
| ಗ್ರಹಿಕೆ | 35 | 44 |
| ಅಭಿವ್ಯಕ್ತಿ | 30 | 38 |
| ಪ್ರಶಂಸೆ | 06 | 08 |
| ಒಟ್ಟು | 100 | 125 |

### 2. ವಿಷಯಾನುಸಾರ ಪ್ರಾಮುಖ್ಯತೆ

| ವಿಷಯ ಉಪಘಟಕ | ಪ್ರತಿಶತ ಅಂಕಗಳು | ದತ್ತ ಅಂಕಗಳು |
|---|---|---|
| ಗದ್ಯ | 35 | 44 |
| ಪದ್ಯ | 34 | 42 |
| ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯರಚನೆ | 31 | 39 |
| ಒಟ್ಟು | 100 | 125 |

## 3. ಪ್ರಶ್ನಾನುಸಾರ ಪ್ರಾಮುಖ್ಯತೆ

| ಪ್ರಶ್ನೆಗಳ ವಿಧಗಳು | ಪ್ರತಿಶತ ಅಂಕಗಳು | ದತ್ತ ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| ವಸ್ತು ನಿಷ್ಠ | 20 | 25 | 25 |
| ಕಿರುಉತ್ತರಗಳು (1) | 08 | 10 | 10 |
| ಕಿರು ಉತ್ತರಗಳು (2) | 24 | 30 | 15 |
| ದೀರ್ಘ ಉತ್ತರಗಳು (1) | 24 | 30 | 10 |
| ದೀರ್ಘ ಉತ್ತರಗಳು (2) | 16 | 20 | 05 |
| ದೀರ್ಘ ಉತ್ತರಗಳು (3) | 08 | 10 | 02 |
| ಒಟ್ಟು | 100 | 125 | 67 |

## 4. ಕಠಿಣತೆಯ ಮಟ್ಟ

| ಸುಲಭ | ಸಾಧಾರಣ | ಕಠಿಣ |
|---|---|---|
| 20% | 50% | 30% |

## 5. ಪ್ರಶ್ನಪತ್ರಿಕೆ ವಿನ್ಯಾಸ

| | | | |
|---|---|---|---|
| 1 | ಬಹು ಆಯ್ಕೆ ಪ್ರಶ್ನೆಗಳು | 1 ಅಂಕದ 15 ಪ್ರಶ್ನೆಗಳು | 15x1=15 |
| 2 | ಬಿಟ್ಟ ಸ್ಥಳ ತುಂಬುವುದು | 1 ಅಂಕದ 05 ಪ್ರಶ್ನೆಗಳು | 05x1=05 |
| 3 | ಹೊಂದಿಸಿ ಬರೆಯುವುದು | 1 ಅಂಕದ 05 ಪ್ರಶ್ನೆಗಳು | 05x1=05 |
| 4 | ಒಂದು ವಾಕ್ಯದಲ್ಲಿ ಉತ್ತರಿಸುವುದು | 1 ಅಂಕದ 10 ಪ್ರಶ್ನೆಗಳು | 10x1=10 |
| 5 | 3–4 ವಾಕ್ಯಗಳಲ್ಲಿ ಉತ್ತರಿಸುವುದು | 2 ಅಂಕದ 15 ಪ್ರಶ್ನೆಗಳು | 15x2=30 |
| 6 | 5–6 ವಾಕ್ಯಗಳಲ್ಲಿ ಉತ್ತರಿಸುವುದು | 3 ಅಂಕದ 10 ಪ್ರಶ್ನೆಗಳು | 10x3=30 |
| 7 | 8–10 ವಾಕ್ಯಗಳಲ್ಲಿ ಉತ್ತರಿಸುವುದು | 4 ಅಂಕದ 05 ಪ್ರಶ್ನೆಗಳು | 05x4=20 |
| 8 | ಪ್ರಬಂಧ ಮತ್ತು ವಿಸ್ತಾರವಾಗಿ ಉತ್ತರಿಸುವುದು | 5 ಅಂಕದ 02 ಪ್ರಶ್ನೆಗಳು | 02x5=10 |
| | ಒಟ್ಟು | 67 ಪ್ರಶ್ನೆಗಳು | 125 ಅಂಕಗಳು |

# ಆ) ದ್ವಿತೀಯ ಭಾಷೆ ಮತ್ತು ತೃತೀಯ ಭಾಷೆ

## 1. ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

| ಉದ್ದಿಷ್ಟಗಳು | ಪ್ರತಿಶತ ಅಂಕಗಳು | ದತ್ತ ಅಂಕಗಳು |
|---|---|---|
| ಜ್ಞಾನ | 25 | 25 |
| ಗ್ರಹಿಕೆ | 38 | 38 |
| ಅಭಿವ್ಯಕ್ತಿ | 33 | 33 |
| ಪ್ರಶಂಸೆ | 04 | 04 |
| ಒಟ್ಟು | 100 | 100 |

PH.18.4

## 2. ವಿಷಯಾನುಸಾರ ಪ್ರಾಮುಖ್ಯತೆ :

| ಘಟಕ | ಪ್ರತಿಶತ ಅಂಕಗಳು | ದತ್ತ ಅಂಕಗಳು |
|---|---|---|
| ಗದ್ಯ | 35 | 35 |
| ಪದ್ಯ | 32 | 32 |
| ವ್ಯಾಕರಣಾಂಶಗಳು ಮತ್ತು ವಾಕ್ಯ ರಚನೆ | 33 | 33 |
| ಒಟ್ಟು | 100 | 100 |

## 3. ಪ್ರಶ್ನಾನುಸಾರ ಪ್ರಾಮುಖ್ಯತೆ :

| ಪ್ರಶ್ನೆಗಳ ವಿಧಗಳು | | ಪ್ರತಿಶತ ಅಂಕಗಳು | ದತ್ತ ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|
| ವಸ್ತುನಿಷ್ಠ ಪ್ರಶ್ನೆಗಳು | ವಸ್ತು ನಿಷ್ಠ | 25 | 25 | 25 |
| ಒಂದು ವಾಕ್ಯದ ಉತ್ತರ | ಕಿರುಉತ್ತರ (1) | 08 | 08 | 08 |
| 2–3 ವಾಕ್ಯದ ಉತ್ತರ | ಕಿರುಉತ್ತರ (2) | 30 | 30 | 15 |
| 3–4 ವಾಕ್ಯದ ಉತ್ತರ | ದೀರ್ಘ ಉತ್ತರ (1) | 15 | 15 | 05 |
| 4–6 ವಾಕ್ಯದ ಉತ್ತರ | ದೀರ್ಘ ಉತ್ತರ (2) | 12 | 12 | 03 |
| ಪತ್ರ, ಪ್ರಬಂಧ | ದೀರ್ಘ ಉತ್ತರ (3) | 10 | 10 | 02 |
| ಒಟ್ಟು | | 100 | 100 | 58 |

## 4. ಕಠಿಣತೆಯ ಮಟ್ಟ

| ಸುಲಭ | ಸಾಧಾರಣ | ಕಠಿಣ |
|---|---|---|
| 20% | 50% | 30% |

## 5. ಪ್ರಶ್ನಪತ್ರಿಕೆ ವಿನ್ಯಾಸ

| | | | |
|---|---|---|---|
| 1. | ಬಹು ಆಯ್ಕೆಯ ಪ್ರಶ್ನೆಗಳು | 1 ಅಂಕದ 15 ಪ್ರಶ್ನೆಗಳು | 15x1=15 |
| 2. | ಬಿಟ್ಟ ಸ್ಥಳ ತುಂಬುವುದು | 1 ಅಂಕದ 05 ಪ್ರಶ್ನೆಗಳು | 05x1=05 |
| 3. | ಹೊಂದಿಸಿ ಬರೆಯುವುದು | 1 ಅಂಕದ 05 ಪ್ರಶ್ನೆಗಳು | 05x1=05 |
| 4. | ಒಂದು ವಾಕ್ಯದಲ್ಲಿ ಉತ್ತರಿಸುವುದು | 1 ಅಂಕದ 08 ಪ್ರಶ್ನೆಗಳು | 08x1=08 |
| 5. | 2–3 ವಾಕ್ಯಗಳಲ್ಲಿ ಉತ್ತರಿಸುವುದು | 2 ಅಂಕದ 15 ಪ್ರಶ್ನೆಗಳು | 15x2=30 |
| 6. | 3–4 ವಾಕ್ಯಗಳಲ್ಲಿ ಉತ್ತರಿಸುವುದು | 3 ಅಂಕದ 05 ಪ್ರಶ್ನೆಗಳು | 05x3=15 |
| 7. | 4–6 ವಾಕ್ಯಗಳಲ್ಲಿ ಉತ್ತರಿಸುವುದು | 4 ಅಂಕದ 3 ಪ್ರಶ್ನೆಗಳು | 03x4=12 |
| 8. | ಪ್ರಬಂಧ ಮತ್ತು ವಿಸ್ತಾರವಾಗಿ ಉತ್ತರಿಸುವುದು | 5 ಅಂಕದ 02 ಪ್ರಶ್ನೆಗಳು | 02x5=10 |
| | ಒಟ್ಟು | **58 ಪ್ರಶ್ನೆಗಳು** | **100 ಅಂಕಗಳು** |

## ಇ. ಗಣಿತ

### ಉದ್ದಿಷ್ಟಗಳಿಗೆ ಪ್ರಾಮುಖ್ಯತೆ

| ಕ್ರಮ ಸಂಖ್ಯೆ | ಉದ್ದಿಷ್ಟಗಳು | ಶೇಕಡಾ |
|---|---|---|
| 1. | ಜ್ಞಾನ | 24 |
| 2. | ತಿಳುವಳಿಕೆ | 40 |
| 3. | ಅನ್ವಯ | 20 |
| 4. | ಕೌಶಲ | 16 |
| | **ಒಟ್ಟು** | **100** |

### ಉದ್ದೇಶಗಳಿಗೆ ನೀಡಿರುವ ಪ್ರಾಮುಖ್ಯತೆ

| ಉದ್ದೇಶಗಳು | ಬಹು ಆಯ್ಕೆಯ ಪ್ರಶ್ನೆಗಳು 1 ಅಂಕ | ವಸ್ತುನಿಷ್ಠ ಪ್ರಶ್ನೆಗಳು 1 ಅಂಕ | ಲಘು ಉತ್ತರ 2 ಅಂಕಗಳು | ದೀರ್ಘಉತ್ತರ 3 ಅಂಕಗಳು | ದೀರ್ಘಉತ್ತರ 4 ಅಂಕಗಳು | ಒಟ್ಟು ಅಂಕ ಗಳು | ಶೇಕಡಾ |
|---|---|---|---|---|---|---|---|
| ಜ್ಞಾನ | 1x8=8 | 1x6=6 | 2x5=10 | – | – | 24 | 24% |
| ತಿಳುವಳಿಕೆ | 1x8=8 | 1x4=4 | 2x4=8 | 3x4=12 | 4x2=8 | 40 | 40% |
| ಅನ್ವಯ | 1x4=4 | – | 2x5=10 | 3x2=6 | – | 20 | 20% |
| ಕೌಶಲ | – | – | 2x4=8 | – | 4x2=8 | 16 | 16% |
| ಒಟ್ಟು | **1x20=20** | **1x10=10** | **2x18=36** | **3x6=18** | **4x4=16** | **100** | **100** |

### ಪ್ರಶ್ನೆಯ ಸ್ವರೂಪಗಳಿಗೆ ನೀಡಿರುವ ಪ್ರಾಮುಖ್ಯತೆ

| ಕ್ರಮ ಸಂಖ್ಯೆ | ಪ್ರಶ್ನೆಯ ಸ್ವರೂಪ | ಪ್ರಶ್ನೆಗಳ ಸಂಖ್ಯೆ | ಅಂಕಗಳು |
|---|---|---|---|
| 1. | ಬಹು ಆಯ್ಕೆಯ ಪ್ರಶ್ನೆಗಳು | 20 | 20 |
| 2. | ವಸ್ತುನಿಷ್ಠ ಪ್ರಶ್ನೆಗಳು | 10 | 10 |
| 3. | ಲಘು ಉತ್ತರ ಪ್ರಶ್ನೆಗಳು (2 ಅಂಕಗಳು) | 18 | 36 |
| 4. | ದೀರ್ಘ ಉತ್ತರ ಪ್ರಶ್ನೆಗಳು (3 ಅಂಕಗಳು) | 6 | 18 |
| 5. | ದೀರ್ಘ ಉತ್ತರ ಪ್ರಶ್ನೆಗಳು (4 ಅಂಕಗಳು) | 4 | 16 |
| | **ಒಟ್ಟು** | **58** | **100** |

### ಶೇಕಡಾವಾರು ಪ್ರಶ್ನೆಗಳ ಹಂಚಿಕೆ

| | |
|---|---|
| ಸುಲಭ | 30% |
| ಸಾಮಾನ್ಯ | 30% |
| ಕಠಿಣ | 40% |

## ಪ್ರಶ್ನಪತ್ರಿಕೆಯ ವಿನ್ಯಾಸ

| | | | |
|---|---|---|---|
| 1. | ಬಹು ಆಯ್ಕೆ ಪ್ರಶ್ನೆಗಳು | 1ಅಂಕದ 20 ಪ್ರಶ್ನೆಗಳು | 20x1=20 |
| 2. | ಆಬ್ಜೆಕ್ಟಿವ್ ಪ್ರಶ್ನೆಗಳು | 1 ಅಂಕದ 10 ಪ್ರಶ್ನೆಗಳು | 10x =10 |
| 3. | 2 ಅಂಕಗಳ ಪ್ರಶ್ನೆಗಳು | 2 ಅಂಕದ 18 ಪ್ರಶ್ನೆಗಳು | 18x2=36 |
| 4. | 3 ಅಂಕಗಳ ಪ್ರಶ್ನೆಗಳು | 3 ಅಂಕಗಳ 06 ಪ್ರಶ್ನೆಗಳು | 06x3=18 |
| 5. | 4 ಅಂಕಗಳ ಪ್ರಶ್ನೆಗಳು | 4 ಅಂಕಗಳ 04 ಪ್ರಶ್ನೆಗಳು | 4x4=16 |
| | **ಒಟ್ಟು** | **58 ಪ್ರಶ್ನೆಗಳು** | **100 ಅಂಕಗಳು** |

## ಈ. ವಿಜ್ಞಾನ (ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರ)

## ಉದ್ದೇಶಗಳಿಗೆ ನೀಡಿರುವ ಪ್ರಾಮುಖ್ಯತೆ

| ಕ್ರ.ಸಂ. | ಉದ್ದೇಶಗಳು | ವಸ್ತುನಿಷ್ಠ ಪ್ರಶ್ನೆಯ ವಿಧಗಳು ಪ್ರ x ಅಂ | ಕಿ.ಉ 1 ಅಂಕ | ಕಿ.ಉ. 2 ಅಂಕ | ದೀ.ಉ. 3 ಅಂಕ | ದೀ. ಉ. 4 ಅಂಕ | ಒಟ್ಟು | ಶೇಕಡಾ |
|---|---|---|---|---|---|---|---|---|
| 1. | ಜ್ಞಾನ | ಬ.ಆ 1x1 =1<br>ಬಿ.ಸ್ಥ.ಭ. 1x1 =1 | 2x1 =2 | 3x2 =6 | 1x3 =3 | – | 13 | 20% |
| 2. | ತಿಳುವಳಿಕೆ | ಬ.ಆ. 2x1 =2<br>ಬಿ.ಸ್ಥ.ಭ. 2x1 =2<br>ಹೊಂ.ಬ. 4x1 =4 | 3x1 =3 | 2x2 =4 | 1x3 =3 | 2x4 =8 | 26 | 40% |
| 3. | ಅನ್ವಯ | ಬ.ಆ. 7x1 =7 | 1x1 =1 | 1x2 =2 | 1x3 =3 | – | 13 | 20% |
| 4. | ಕೌಶಲ | – | – | 3x2 =6 | 1x3 =3 | 1x4 =4 | 13 | 20% |
| | **ಒಟ್ಟು** | **17x1 =17** | **6x1 =6** | **9x2 =18** | **4x3 =12** | **3x4 =12** | **65** | **100%** |

## ಪ್ರಶ್ನಪತ್ರಿಕೆಯ ವಿನ್ಯಾಸ–ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರ

| | | | |
|---|---|---|---|
| 1. | ಬಹುಆಯ್ಕೆ ಪ್ರಶ್ನೆಗಳು | 1 ಅಂಕದ 10 ಪ್ರಶ್ನೆಗಳು | 10x1 =10 |
| 2. | ಬಿಟ್ಟ ಸ್ಥಳ ತುಂಬುವುದು | 1 ಅಂಕದ 03 ಪ್ರಶ್ನೆಗಳು | 03x1 =03 |
| 3. | ಹೊಂದಿಸಿ ಬರೆಯುವುದು | 1 ಅಂಕದ 04 ಪ್ರಶ್ನೆಗಳು | 04x1 =04 |
| 4. | ಒಂದು ವಾಕ್ಯದಲ್ಲಿ ಉತ್ತರಿಸುವುದು | 1 ಅಂಕದ 06 ಪ್ರಶ್ನೆಗಳು | 06x1 =06 |
| 5. | 2 ಅಂಕಗಳ ಪ್ರಶ್ನೆಗಳು | 2 ಅಂಕಗಳ 09 ಪ್ರಶ್ನೆಗಳು | 09x2 =18 |
| 6. | 3 ಅಂಕಗಳ ಪ್ರಶ್ನೆಗಳು | 3 ಅಂಕಗಳ 04 ಪ್ರಶ್ನೆಗಳು | 04x3 =12 |
| 7. | 4 ಅಂಕಗಳ ಪ್ರಶ್ನೆಗಳು | 4 ಅಂಕಗಳ 03 ಪ್ರಶ್ನೆಗಳು | 03x4 =12 |
| | **ಒಟ್ಟು** | **39 ಪ್ರಶ್ನೆಗಳು** | **65 ಅಂಕಗಳು** |

## ಕಠಿಣತೆಯ ಮಟ್ಟ

| ಕ್ರಸಂ | ಮಟ್ಟ | ಅಂಕಗಳು | ಶೇಕಡಾ |
|---|---|---|---|
| 1. | ಸುಲಭ | 19 | 30% |
| 2. | ಸಾಮಾನ್ಯ | 19 | 30% |
| 3. | ಕಠಿಣ | 27 | 40% |
| | **ಒಟ್ಟು** | **65** | **100%** |

## ಉ. ಜೀವಶಾಸ್ತ್ರ

### ಉದ್ದೇಶಗಳಿಗೆ ನೀಡಿರುವ ಪ್ರಾಮುಖ್ಯತೆ

| ಕ್ರ.ಸಂ. | ಉದ್ದೇಶಗಳು | ಅಂಕಗಳು | ಶೇಕಡಾ |
|---|---|---|---|
| 1. | ಜ್ಞಾನ | 07 | 20.00 |
| 2. | ತಿಳುವಳಿಕೆ | 14 | 40.00 |
| 3. | ಅನ್ವಯ | 07 | 20.00 |
| 4. | ಕೌಶಲ | 07 | 20.00 |
| | **ಒಟ್ಟು** | **35** | **100** |

### ಪ್ರಶ್ನೆಗಳ ಸ್ವರೂಪ ಮತ್ತು ಸಂಖ್ಯೆಗೆ ನೀಡಿರುವ ಪ್ರಾಮುಖ್ಯತೆ

| ಕ್ರ.ಸಂ. | ಪ್ರಶ್ನೆಯ ಸ್ವರೂಪ | ಪ್ರಶ್ನೆಗಳ ಸಂಖ್ಯೆ | ಅಂಕಗಳು |
|---|---|---|---|
| 1. | ಬಹು ಆಯ್ಕೆ ಪ್ರಶ್ನೆಗಳು | 5 | 5 |
| 2. | ಹೊಂದಿಸಿ ಬರೆಯಿರಿ | 4 | 4 |
| 3. | ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೆಗಳು | 4 | 4 |
| 4. | ಎರಡು ಅಂಕಗಳ ಪ್ರಶ್ನೆಗಳು | 6 | 12 |
| 5. | ಮೂರು ಅಂಕಗಳ ಪ್ರಶ್ನೆಗಳು | 2 | 6 |
| 6. | ನಾಲ್ಕು ಅಂಕಗಳ ಪ್ರಶ್ನೆ | 1 | 4 |
| | ಒಟ್ಟು | 22 | 35 |

### ಪ್ರಶ್ನೆಗಳ ಕಠಿಣತೆಯ ಮಟ್ಟ

| ಕ್ರ.ಸಂ. | ಪ್ರಶ್ನೆಗಳ ಕಠಿಣತೆಯ ಮಟ್ಟ | ಅಂಕಗಳು | ಶೇಕಡಾ |
|---|---|---|---|
| 1. | ಸುಲಭ | 10 | 28.5 |
| 2. | ಸಾಮಾನ್ಯ | 11 | 31.5 |
| 3. | ಕಠಿಣ | 14 | 40.00 |
| | **ಒಟ್ಟು** | **35** | **100** |

| | | | |
|---|---|---|---|
| 1. | ಬಹುಆಯ್ಕೆಯ ಪ್ರಶ್ನೆಗಳು | 1 ಅಂಕದ 05 ಪ್ರಶ್ನೆಗಳು | 5x1 =05 |
| 2. | ಬಿಟ್ಟ ಸ್ಥಳ ತುಂಬುವುದು/ಹೊಂದಿಸಿ ಬರೆಯುವುದು | 1 ಅಂಕದ 04 ಪ್ರಶ್ನೆಗಳು | 04x1 =04 |
| 3. | ಒಂದು ವಾಕ್ಯದಲ್ಲಿ ಉತ್ತರಿಸುವುದು | 1 ಅಂಕದ 04 ಪ್ರಶ್ನೆಗಳು | 04x1 =04 |
| 4. | 2 ಅಂಕಗಳ ಪ್ರಶ್ನೆಗಳು | 2 ಅಂಕದ 06 ಪ್ರಶ್ನೆಗಳು | 06x2 =12 |
| 5. | 3 ಅಂಕಗಳ ಪ್ರಶ್ನೆಗಳು | 3 ಅಂಕಗಳ 02 ಪ್ರಶ್ನೆಗಳು | 02x3 =06 |
| 6. | 4 ಅಂಕಗಳ ಪ್ರಶ್ನೆಗಳು | 4 ಅಂಕಗಳ 01 ಪ್ರಶ್ನೆ | 1x4 =04 |
| | ಒಟ್ಟು | **22 ಪ್ರಶ್ನೆಗಳು** | **35 ಅಂಕಗಳು** |
| | ವಿಜ್ಞಾನ ಒಟ್ಟು | **61 ಪ್ರಶ್ನೆಗಳು** | **65x35 =100 ಅಂಕಗಳು** |

## ಊ. ಸಮಾಜ ವಿಜ್ಞಾನ

### ಉದ್ದೇಶಗಳಿಗೆ ನೀಡಿರುವ ಪ್ರಾಮುಖ್ಯತೆ

| ಕ್ರ. ಸಂ. | ಉದ್ದೇಶಗಳು | ಅಂಕಗಳು | ಶೇಕಡಾವಾರು % |
|---|---|---|---|
| 1 | ಜ್ಞಾನ | 26 | 26% |
| 2 | ಅರ್ಥೈಸುವಿಕೆ | 50 | 50% |
| 3 | ಅನ್ವಯ | 20 | 20% |
| 4 | ಕೌಶಲ | 04 | 04% |
| 5 | ಒಟ್ಟು | 100 | 100% |

### ಪ್ರಶ್ನೆಯ ಸ್ವರೂಪ ಮತ್ತು ಅವುಗಳ ಸಂಖ್ಯೆಗಳಿಗೆ ನೀಡಿರುವ ಪ್ರಾಮುಖ್ಯತೆ ಹಾಗೂ ಒಟ್ಟು ಅಂಕಗಳು

| ಕ್ರಮ ಸಂಖ್ಯೆ | ವಿಷಯ | ವಸ್ತುನಿಷ್ಠ | 1 ಅಂಕ | 2 ಅಂಕಗಳು | 3ಅಂಕಗಳು | 4 ಅಂಕಗಳು | ಒಟ್ಟು ಪ್ರಶ್ನೆಗಳು | ಒಟ್ಟು ಅಂಕಗಳು |
|---|---|---|---|---|---|---|---|---|
| 1 | ಇತಿಹಾಸ | 6•5*2▲ | 3 | 7 | 2 | 1 | 26 | 40 |
| 2 | ಪೌರನೀತಿ | 3• 1▲ | 3 | 3 | 1 | 1 | 12 | 20 |
| 3 | ಭೂಗೋಳಶಾಸ್ತ್ರ | 4• 1▲ | 2 | 4 | 2 | 1 ಕೌಶಲ | 14 | 25 |
| 4 | ಅರ್ಥಶಾಸ್ತ್ರ | 2• 1▲ | 1 | 2 | 1 | 1 | 08 | 15 |
| | | **15•+5*5▲** | **9** | **32** | **18** | **16** | **60** | **100** |

### ಸಂಕೇತಾಕ್ಷರಗಳ ಅರ್ಥ

ಬಹು ಆಯ್ಕೆ ಪ್ರಶ್ನೆಗಳು : •

ಬಿಟ್ಟಿರುವ ಸ್ಥಳ ಭರ್ತಿಮಾಡಿ : ▲

ಹೊಂದಿಸಿ ಬರೆಯಿರಿ : * ಹೊಂದಿಸಿ ಬರೆಯಿರಿ ಇದು ಒಂದು ಪ್ರಶ್ನೆಯೆಂದು ತಿಳಿಯುವುದು.

## ಕಠಿಣತೆಯ ಮಟ್ಟ

| ಕ್ರ.ಸಂ. | ಕಠಿಣತೆಯ ಮಟ್ಟ | ಶೇಕಡವಾರು |
|---|---|---|
| 01 | ಸುಲಭ | 30% |
| 02 | ಸಾಮಾನ್ಯ | 30% |
| 03 | ಕಠಿಣ | 40% |

## ಪ್ರಶ್ನಪತ್ರಿಕೆಯ ವಿನ್ಯಾಸ

| | | | |
|---|---|---|---|
| 1. | ಬಹು ಆಯ್ಕೆಯ ಪ್ರಶ್ನೆಗಳು | 1 ಅಂಕದ 15 ಪ್ರಶ್ನೆಗಳು | 15x1 =15 |
| 2. | ಬಿಟ್ಟ ಸ್ಥಳ ತುಂಬುವುದು | 1 ಅಂಕದ 05 ಪ್ರಶ್ನೆಗಳು | 05x1 =05 |
| 3. | ಹೊಂದಿಸಿ ಬರೆಯುವುದು | 1 ಅಂಕದ 05 ಪ್ರಶ್ನೆಗಳು | 05x1 =05 |
| 4 | ಒಂದು ವಾಕ್ಯದಲ್ಲಿ ಉತ್ತರಿಸುವುದು | 1 ಅಂಕದ 09 ಪ್ರಶ್ನೆಗಳು | 09x1 =09 |
| 5. | 2 ಅಂಕಗಳ ಪ್ರಶ್ನೆಗಳು | 2 ಅಂಕಗಳ 16 ಪ್ರಶ್ನೆಗಳು | 16x2 =32 |
| 6. | 3 ಅಂಕಗಳ ಪ್ರಶ್ನೆಗಳು | 3 ಅಂಕಗಳ 06 ಪ್ರಶ್ನೆಗಳು | 06x3 =18 |
| 7. | 4 ಅಂಕಗಳ ಪ್ರಶ್ನೆಗಳು | 4 ಅಂಕಗಳ 04 ಪ್ರಶ್ನೆಗಳು | 04x4 =16 |
| | **ಒಟ್ಟು** | **60 ಪ್ರಶ್ನೆಗಳು** | **100 ಅಂಕಗಳು** |

# ಸಹಪಠ್ಯ ವಿಷಯಗಳ ಮೌಲ್ಯಮಾಪನ

1. **ಯೋಜನೆ:** ಇದುವರೆಗೆ ಚಾಲ್ತಿಯಲ್ಲಿದ್ದ ಯೋಜನೆ (ಪ್ರಾಜೆಕ್ಟ್)ಯನ್ನು ಮುಂದುವರಿಸಲಾಗಿದೆ.

ಅನುಭವಗಳ ಮೂಲಕ ಸಂಗ್ರಹವಾಗುವ ಮಾಹಿತಿಯೇ ಜ್ಞಾನ. ಈ ಜ್ಞಾನ ನಮ್ಮ ಸುತ್ತಮುತ್ತಲ ಪರಿಸರದಿಂದ ಲಭ್ಯವಾಗುತ್ತದೆ. ಇದನ್ನು ಪಡೆಯಬೇಕಾದರೆ ಮಕ್ಕಳನ್ನು ಸ್ವಯಂ ಕಲಿಕೆಗೆ ತೊಡಗಿಸಬೇಕು 'ಪ್ರಾಜೆಕ್ಟ್' ಅಥವಾ 'ಯೋಜನೆ' ಸ್ವಯಂ ಕಲಿಕೆಗೆ ಪೂರಕವಾದ ಒಂದು ಮಾಧ್ಯಮ.

'ಯೋಜನೆ' ಎಂಬುದು ಉದ್ದೇಶಗಳ ನಿರೂಪಣೆ, ಕ್ರಿಯಾಯೋಜನೆ, ಕ್ರಿಯಾಯೋಜನೆಯ ಅನುಷ್ಠಾನ, ವರದಿ ತಯಾರಿ ಮತ್ತು ಅನುಭವಗಳ ವಿನಿಮಯ ಎಂಬ ಐದು ಹಂತಗಳನ್ನು ಒಳಗೊಂಡಿರುತ್ತದೆ. 'ಯೋಜನಾ' ಕಾರ್ಯದಲ್ಲಿ ತೊಡಗುವ ವಿದ್ಯಾರ್ಥಿ ತನ್ನ ಗುರಿಗಳ ಬಗ್ಗೆ ಸ್ಪಷ್ಟ ಚಿತ್ರಣ ಮೂಡಿಸಿಕೊಳ್ಳಬೇಕು.

'ಯೋಜನಾ' ಕಾರ್ಯ ಒಮ್ಮೆಗೆ ಮಾಡಿ ಮುಗಿಸುವ ಚಟುವಟಿಕೆಯಲ್ಲ. ಹಲವು ಚಟುವಟಿಕೆಗಳಲ್ಲಿ ವಿದ್ಯಾರ್ಥಿ ತನ್ನನ್ನು ತೊಡಗಿಸಿಕೊಳ್ಳಬೇಕಾಗುತ್ತದೆ. ಈ ಚಟುವಟಿಕೆಗಳಿಗೆ ಶಿಕ್ಷಕರ ಮಾರ್ಗದರ್ಶನವೂ ಬೇಕಾಗುತ್ತದೆ.

ಪ್ರತಿ ಟರ್ಮಿಗೆ ಈ ಕೆಳಕಂಡಂತೆ ಯೋಜನೆಯನ್ನು ವಿದ್ಯಾರ್ಥಿಗಳಿಂದ ಮಾಡಿಸಬೇಕು. ಮೊದಲ ಟರ್ಮಿನಲ್ಲಿ ಭಾಷೆ (ಪ್ರಥಮ, ದ್ವಿತೀಯ, ತೃತೀಯ ಭಾಷೆ) ಎರಡನೆಯ ಟರ್ಮಿನಲ್ಲಿ ಗಣಿತ, ವಿಜ್ಞಾನ, ಸಮಾಜ ವಿಜ್ಞಾನ.

ಯೋಜನೆಯ ಮೌಲ್ಯಮಾಪನದ ಹಂತದಲ್ಲಿ ಶಿಕ್ಷಕರು ಬಹಳ ಜಾಗರೂಕರಾಗಿರಬೇಕಾಗುತ್ತದೆ. 'ಯೋಜನಾ' ಕಾರ್ಯದ ಉತ್ಪನ್ನದ ಆಧಾರದಿಂದ ಮಾತ್ರ ಮೌಲ್ಯಮಾಪನ ಮಾಡದೆ ನಿರಂತರ ಮೌಲ್ಯಮಾಪನ ಮಾಡುವುದು ಅತ್ಯಗತ್ಯ. ಮೌಲ್ಯಮಾಪನದ ಮಾಹಿತಿಯನ್ನು ಆಯಾ ವಿಷಯ ಬೋಧಕರು ತಮ್ಮ ವೈಯಕ್ತಿಕ ವಹಿಯಲ್ಲಿ ನಮೂದಿಸಿಕೊಳ್ಳಬೇಕು.

ಪ್ರತಿ ತರಗತಿಯಲ್ಲಿರುವ ವಿದ್ಯಾರ್ಥಿಗಳನ್ನು ಮೂರು ವಿಭಾಗ ಮಾಡಿಕೊಳ್ಳಬೇಕು.

ಉದಾ: ಒಂದು ತರಗತಿಯಲ್ಲಿ 60 ವಿದ್ಯಾರ್ಥಿಗಳಿದ್ದರೆ ಒಂದೊಂದು ವಿಭಾಗದಲ್ಲಿ 20 ವಿದ್ಯಾರ್ಥಿಗಳಿರುವಂತೆ ವ್ಯವಸ್ಥೆ ಮಾಡಿಕೊಳ್ಳಬೇಕು. ಒಂದೊಂದು ವಿಭಾಗದಿಂದ ಮೊದಲ ಟರ್ಮಿನಲ್ಲಿ ಒಂದೊಂದು 'ಭಾಷೆ'ಯಲ್ಲೂ, ಎರಡನೆಯ ಟರ್ಮಿನಲ್ಲಿ ಒಂದೊಂದು 'ಕೋರ್' ವಿಷಯದಲ್ಲೂ ವೈಯಕ್ತಿಕ ಅಥವಾ ಗುಂಪಿನಲ್ಲಿ ಯೋಜನಾಕಾರ್ಯ ಮಾಡಿಸಬೇಕು. ಅಂದರೆ ಒಬ್ಬ ವಿದ್ಯಾರ್ಥಿ ಒಂದು ಟರ್ಮಿನಲ್ಲಿ ಯಾವುದಾದರೊಂದು ಯೋಜನಾ ಕಾರ್ಯ ಮಾತ್ರ ಮಾಡುವಂತಿರಬೇಕು.

ಯೋಜನಾ ಕಾರ್ಯಕ್ಕಾಗಿ ಪ್ರತ್ಯೇಕ ಅವಧಿಗಳನ್ನು ನೀಡಲಾಗಿಲ್ಲ. ಆಯಾ ವಿಷಯ ಬೋಧಕರೇ ತಮ್ಮ ಬೋಧನಾ ಅವಧಿಯಲ್ಲಿ ಅಥವಾ ಬಿಡುವಿನ ವೇಳೆಯಲ್ಲಿ ಮಕ್ಕಳಿಗೆ ಮಾರ್ಗದರ್ಶನ ನೀಡಬೇಕು.

**ಯೋಜನಾ ಕಾರ್ಯಕ್ಕೆ ನೀಡಬಹುದಾದ ವಿವಿಧ ವಿಷಯಗಳು ಮತ್ತು ವಿವರವಾದ ಮಾಹಿತಿಗಳಿಗೆ ಈಗಾಗಲೇ ನೀಡಲಾದ 'ಯೋಜನಾ' ಸಂಚಿಕೆಯನ್ನು ಬಳಸಿಕೊಳ್ಳಬಹುದು.**

2. ಕಾರ್ಯಾನುಭವ, ಕಲೆ ಮತ್ತು ಸೃಜನಾತ್ಮಕ ಅಭಿವ್ಯಕ್ತಿಗೆ ಸಂಬಂಧಪಟ್ಟಂತೆ ನಾಲ್ಕು ಕಿರುಪರೀಕ್ಷೆ ಒಂದು ಅರ್ಧ ವಾರ್ಷಿಕ ಪರೀಕ್ಷೆ ಒಂದು ವಾರ್ಷಿಕ ಪರೀಕ್ಷೆಯನ್ನು ನಡೆಸಬೇಕು. ಯೋಜನೆ, ಕಾರ್ಯಾನುಭವ ಇತ್ಯಾದಿ ಸಹಪಠ್ಯ ವಿಷಯಗಳಲ್ಲಿ ಪಂಚಬಿಂದು ಮಾಪನದನ್ವಯ ಮೌಲ್ಯಮಾಪನ ಮಾಡಿ ಶ್ರೇಣಿಗಳನ್ನು ಈ ರೀತಿ ನೀಡಬೇಕು.

| ಶ್ರೇಣಿ | ಸಂಕೇತಾರ್ಥ |
|---|---|
| ಎ | ಅತ್ಯುತ್ತಮ |
| ಬಿ | ಉತ್ತಮ |
| ಸಿ | ಸಾಮಾನ್ಯ |
| ಡಿ | ತೃಪ್ತಿಕರ |
| ಇ | ಕನಿಷ್ಠ |

# ತೇರ್ಗಡೆಯ ನಿಯಮಗಳು

1. ಅ) ಹಾಜರಾತಿ : ಒಂದು ಶೈಕ್ಷಣಿಕ ವರ್ಷದಲ್ಲಿ 220 ಕೆಲಸದ ದಿನಗಳು ಇರುತ್ತವೆ. ವಿದ್ಯಾರ್ಥಿಯು ದಾಖಲಾದ ದಿನದಿಂದ ಶೇ. 75ರಷ್ಟು ಹಾಜರಾತಿ ಕಡ್ಡಾಯವಾಗಿದೆ. 30 ದಿನಗಳ ಹಾಜರಾತಿ ಕೊರತೆಯನ್ನು ವೈದ್ಯಕೀಯ ಪ್ರಮಾಣ ಪತ್ರದ ಆಧಾರದಿಂದ ಶಾಲೆಯ ಮುಖ್ಯೋಪಾಧ್ಯಾಯರು ಮನ್ನಿಸಬಹುದು. ಹಾಜರಾತಿಯ ಕೊರತೆ 30 ದಿನಗಳಿಗೆ ಮೀರಿದಾಗ ವಿದ್ಯಾರ್ಥಿಯು ವಾರ್ಷಿಕ ಪರೀಕ್ಷೆಗೆ ಹಾಜರಾಗಲು ಅವಕಾಶವಿಲ್ಲ. ಹಾಗಾಗಿ ಆತನನ್ನು ಅನುತ್ತೀರ್ಣನೆಂದು ಪರಿಗಣಿಸಲಾಗುವುದು. ವಿದ್ಯಾರ್ಥಿ ಬಯಸಿದರೆ ಅದೇ ತರಗತಿಯಲ್ಲಿ ವ್ಯಾಸಂಗವನ್ನು ಮುಂದುವರಿಸಲು ಅವಕಾಶ ನೀಡಬಹುದು.

ಆ) ಫಲಿತಾಂಶವು ವಾರ್ಷಿಕ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳ ಆಧಾರದಲ್ಲಿ ನಿರ್ಧರಿಸಲ್ಪಡುತ್ತದೆ.

ಇ) ಪ್ರತಿಯೊಂದು ವಿಷಯದಲ್ಲಿ ಕನಿಷ್ಠ ಶೇ. 30 ಮತ್ತು ಸರಾಸರಿ ಶೇ. 35 ಅಂಕಗಳನ್ನು ಗಳಿಸಿದ್ದಲ್ಲಿ ವಿದ್ಯಾರ್ಥಿಯನ್ನು ಉತ್ತೀರ್ಣನೆಂದು ಪರಿಗಣಿಸಬಹುದು. ಅಂದರೆ ~~725 ಅಂಕಗಳಲ್ಲಿ 254~~ ಅಂಕಗಳನ್ನು ವಿದ್ಯಾರ್ಥಿ ಗಳಿಸಿರಬೇಕು.

ಈ) ಸಂಬಂಧಿತ ಮುಖ್ಯೋಪಾಧ್ಯಾಯರಿಗೆ ಮನದಟ್ಟಾಗುವ ಅನಿವಾರ್ಯ ಕಾರಣಗಳಿಂದಾಗಿ ವಿದ್ಯಾರ್ಥಿಯು ವಾರ್ಷಿಕ ಪರೀಕ್ಷೆಗೆ ಗೈರು ಹಾಜರಾಗಿದ್ದಲ್ಲಿ ಅವನ ಕಿರುಪರೀಕ್ಷೆಗಳ (ಅಂದರೆ ನಾಲ್ಕು ಕಿರುಪರೀಕ್ಷೆಗಳೆಂದು ಅರ್ಥೈಸದೆ, ಅವನು ಹಾಜರಿದ್ದ ಕಿರುಪರೀಕ್ಷೆಗಳನ್ನು ಮಾತ್ರ ಪರಿಗಣಿಸಿ) ಶೇ. 50 ಮತ್ತು ಅರ್ಧವಾರ್ಷಿಕ ಪರೀಕ್ಷೆಯ ಶೇ. 50 ಅಂಕಗಳನ್ನು ಪರಿಗಣಿಸಿ ಮೇಲಿನ 'ಇ'ಯಲ್ಲಿ ಕಾಣಿಸಿದಂತೆ ಅಂಕಗಳು ಇದ್ದರೆ ಆತನನ್ನು ಉತ್ತೀರ್ಣನೆಂದು ಘೋಷಿಸಬಹುದು.

ಉ) ವಿದ್ಯಾರ್ಥಿಯು ವಾರ್ಷಿಕ ಪರೀಕ್ಷೆಯಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ವಿಷಯಗಳಲ್ಲಿ ಅನುತ್ತೀರ್ಣನಾದರೆ ಅನುತ್ತೀರ್ಣನಾದ ವಿಷಯದಲ್ಲಿ ಆತ ಗಳಿಸಿರುವ ವಾರ್ಷಿಕ ಪರೀಕ್ಷೆಯ ಶೇ. 50 ಅರ್ಧವಾರ್ಷಿಕ ಪರೀಕ್ಷೆಯ ಶೇ. 25 ಮತ್ತು ಕಿರುಪರೀಕ್ಷೆಗಳ ಶೇ. 25 ಅಂಕಗಳನ್ನು ಪರಿಗಣಿಸಿ ಮೇಲೆ 'ಇ'ಯಲ್ಲಿ ಕಾಣಿಸಿದಂತೆ ಅಂಕಗಳು ಇದ್ದರೆ ಆತನನ್ನು ಉತ್ತೀರ್ಣನೆಂದು ಘೋಷಿಸಬಹುದು.

ಊ) ಮೇಲೆ ಹೇಳಿದ ಎಲ್ಲಾ ಅವಕಾಶಗಳನ್ನು ಪರಿಗಣಿಸಿದಾಗ್ಯೂ ವಿದ್ಯಾರ್ಥಿ ಅನುತ್ತೀರ್ಣನಾದಲ್ಲಿ ಆತನಿಗೆ **ಜೂನ್ ಮೊದಲ ವಾರದಲ್ಲಿ ಮರುಪರೀಕ್ಷೆ ನಡೆಸಿ** ಅದರಲ್ಲೂ ನಿಗದಿತ ಅಂಕಗಳನ್ನು ಗಳಿಸದಿದ್ದರೆ ಆತನನ್ನು **ಅನುತ್ತೀರ್ಣನೆಂದು** ಘೋಷಿಸಬೇಕು.

ಋ) ಉತ್ತೀರ್ಣರಾದ ವಿದ್ಯಾರ್ಥಿಗಳ ಶ್ರೇಣೀಕರಣ

| | | |
|---|---|---|
| 1. | ಶೇ. 35 ರಿಂದ ಶೇ. 49 ಅಂಕಗಳನ್ನು ಪಡೆದ ವಿದ್ಯಾರ್ಥಿಗಳು | ತೃತೀಯ ವರ್ಗ |
| 2. | ಶೇ. 50 ರಿಂದ ಶೇ. 59 ಅಂಕಗಳನ್ನು ಪಡೆದ ವಿದ್ಯಾರ್ಥಿಗಳು | ದ್ವಿತೀಯ ವರ್ಗ |
| 3. | ಶೇ. 60 ರಿಂದ ಶೇ. 84 ಅಂಕಗಳನ್ನು ಪಡೆದ ವಿದ್ಯಾರ್ಥಿಗಳು | ಪ್ರಥಮ ವರ್ಗ |
| 4. | ಶೇ. 85 ಮತ್ತು ಹೆಚ್ಚಿನ ಅಂಕಗಳನ್ನು ಪಡೆದ ವಿದ್ಯಾರ್ಥಿಗಳು | ವಿಶಿಷ್ಟ ಶ್ರೇಣಿ (ಡಿಸ್ಟಿಂಕ್ಷನ್) |

ಎ) * ಸಹಪಠ್ಯ ವಿಷಯಗಳಲ್ಲಿ ತೇರ್ಗಡೆಯಾಗಲು ವಿದ್ಯಾರ್ಥಿ ಕನಿಷ್ಠ 'ಡಿ' ಶ್ರೇಣಿಯನ್ನು ಪಡೆಯುವುದು ಅಗತ್ಯ. ಈ ಚಟುವಟಿಕೆಗಳಲ್ಲಿ ಶೇ. 75 ರಷ್ಟು ಹಾಜರಾತಿ ಕಡ್ಡಾಯವಾಗಿದೆ. ವಿದ್ಯಾರ್ಥಿಗೆ ವಹಿಸಿದ ಚಟುವಟಿಕೆಯನ್ನು ನಿರಂತರ ಮೌಲ್ಯಮಾಪನ ಮಾಡಿ ಪಂಚಬಿಂದು ಮಾಪನದನ್ವಯ ಶ್ರೇಣಿಯನ್ನು ನಿಗದಿಪಡಿಸಬೇಕು. ಹಾಜರಾತಿ ಕಡಿಮೆಯಿದ್ದು ಚಟುವಟಿಕೆಯಲ್ಲಿ ಅನಾಸಕ್ತಿ ತೋರುವ ವಿದ್ಯಾರ್ಥಿಗೆ 'ಇ' ಶ್ರೇಣಿ ನೀಡಬೇಕು.

ಸಹಪಠ್ಯ ವಿಷಯಗಳಲ್ಲಿ 'ಇ' ಶ್ರೇಣಿ ಪಡೆದ ವಿದ್ಯಾರ್ಥಿಯು ಪಠ್ಯ ವಿಷಯಗಳಲ್ಲಿ ಉತ್ತೀರ್ಣನಾಗಿದ್ದರೆ ಆತನನ್ನು ಉತ್ತೀರ್ಣನೆಂದು ಘೋಷಿಸಬಹುದು.

## ಖಾಸಗಿ ಅಭ್ಯರ್ಥಿಗಳಿಗೆ ಅವಕಾಶ

ಬಾಹ್ಯವಾಗಿ ಪರೀಕ್ಷೆಯನ್ನು ಬರೆಯುವ ವಿದ್ಯಾರ್ಥಿಗಳನ್ನು ಮುಖ್ಯ ಶಿಕ್ಷಣ ವಾಹಿನಿಯಲ್ಲಿ ಸೇರಿಸಿಕೊಳ್ಳುವ ಅವಕಾಶ ಕಲ್ಪಿಸಲು ಕೆಳಕಂಡ ಅಂಶಗಳನ್ನು ಪಾಲಿಸಬೇಕು.

* 8ನೆಯ ತರಗತಿಗಳಿಗೆ ಖಾಸಗಿ ಅಭ್ಯರ್ಥಿಗಳನ್ನು ಸೇರಿಸಿಕೊಳ್ಳಬಹುದು.
* 8ನೆಯ ತರಗತಿಗೆ ಸೇರುವ ಅಭ್ಯರ್ಥಿಗಳಿಗೆ ಆ ವರ್ಷದ ಮೇ 31 ಕ್ಕೆ 14 ವರ್ಷ ಪೂರ್ತಿಯಾಗಿರಬೇಕು.
* ವಯೋಮಿತಿಯ ವಿದ್ಯಾರ್ಥಿಗಳು ತಮ್ಮ ಸಮೀಪದ ಶಾಲೆಯಲ್ಲಿ ಖಾಸಗಿ ವಿದ್ಯಾರ್ಥಿಯಾಗಿ ಜೂನ್ ತಿಂಗಳಿನಲ್ಲಿ ನೋಂದಣಿ ಮಾಡಿಕೊಳ್ಳಬೇಕು.
* ವಾರ್ಷಿಕ ಪರೀಕ್ಷೆಗೆ ಶಾಲೆಯ ವೇಳಾ ಪಟ್ಟಿಗೆ ಅನುಗುಣವಾಗಿ ಹಾಜರಾಗಬೇಕು.
* ಇಂತಹ ವಿದ್ಯಾರ್ಥಿ ತರಗತಿಗೆ ಹಾಜರಾಗುವುದು ಕಡ್ಡಾಯವಲ್ಲ. ಆದರೆ ಆವಶ್ಯಕತೆಯಿದ್ದಾಗ ತರಗತಿಗಳಿಗೆ ಹಾಜರಾಗಿ ಬೋಧನೆ, ಕಲಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ.
* ಇವರಿಗೆ ಸಹಪಠ್ಯ ವಿಭಾಗದ ವಿಷಯಗಳ ಪರೀಕ್ಷೆಯಿಂದ ವಿನಾಯಿತಿಯನ್ನು ನೀಡಲಾಗಿದೆ.

## ದಾಖಲೆಗಳು

### ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರು ಕೆಳಗೆ ಸೂಚಿಸಿದ ದಾಖಲೆಗಳನ್ನು ತಯಾರಿಸಿ ಇಟ್ಟುಕೊಳ್ಳಬೇಕು.

1. ವಿಷಯವಾರು ವಾರ್ಷಿಕ ಪಾಠ ಮತ್ತು ಕಾರ್ಯಹಂಚಿಕೆ ಪಟ್ಟಿ ---------- ಶಿಕ್ಷಕರು
2. ಪಾಠದ ಟಿಪ್ಪಣಿ ---------------------------------- ಶಿಕ್ಷಕರು
3. ಸಹಪಠ್ಯ ವಿಷಯಗಳ ಮೌಲ್ಯಮಾಪನ ವಹಿ ---------------- ಶಿಕ್ಷಕರು
4. ಶಿಕ್ಷಕರ ವೈಯಕ್ತಿಕ ಅಂಕ ವಹಿ ------------------------ ಶಿಕ್ಷಕರು
5. ಪ್ರಗತಿ ಪತ್ರ ------------------------------------ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರು
6. ಕ್ರೋಢೀಕೃತ ಅಂಕ ವಹಿ ------------------------- ಮುಖ್ಯೋಪಾಧ್ಯಾಯರು

ವಿ.ಸೂ. : ಇವುಗಳಿಗೆ ಸಂಬಂಧಿಸಿದ ನಮೂನೆಗಳನ್ನು ಮುಂದಿನ ಪುಟಗಳಲ್ಲಿ ನೀಡಲಾಗಿದೆ.

# 1. ವಿಷಯವಾರು ವಾರ್ಷಿಕ ಪಾಠ ಮತ್ತು ಕಾರ್ಯಹಂಚಿಕೆ ಪಟ್ಟಿ

ಶಿಕ್ಷಕರ ಹೆಸರು : ವರ್ಷ: ವಿಷಯ: ತರಗತಿ :

| ತಿಂಗಳು | ಲಭ್ಯವಿದ್ದ ಅವಧಿಗಳು | ಪಾಠಗಳ ಹೆಸರು | ಪಾಠಕ್ಕೆ ನಿಗದಿ ಪಡಿಸಿದ ಅವಧಿಗಳು | ಬೋಧನೆ ಕಲಿಕೆಗೆ ದೊರಕಿದ ಅವಧಿಗಳು | ಪೂರ್ಣ ಗೊಳಿಸಲಾಗಿತ್ತೇ ಇಲ್ಲವೇ? | ಇಲ್ಲ ವಾದಲ್ಲಿ ಕಾರಣ | ಪೂರ್ಣ ಗೊಳಿಸಲು ಕೈಗೊಂಡ ಕ್ರಮ | ನೀಡಿದ ಚಟುವಟಿಕೆಗಳ ವಿವರ | | ಶಿಕ್ಷಕರ ಸಹಿ | ಮುಖ್ಯ ಶಿಕ್ಷಕರ ಸಹಿ |
|---|---|---|---|---|---|---|---|---|---|---|---|
| | | | | | | | | ಚಟುವಟಿಕೆಗಳ ಸಂಖ್ಯೆ | ತಿದ್ದಿದ್ದು | | |
| ಜೂನ್ | | | | | | | | | | | |
| ಜುಲೈ | | | | | | | | | | | |
| ಆಗಸ್ಟ್ | | | | | | | | | | | |
| ಸೆಪ್ಟೆಂಬರ್ | | | | | | | | | | | |
| ಅಕ್ಟೋಬರ್ | | | | | | | | | | | |
| ನವೆಂಬರ್ | | | | | | | | | | | |
| ಡಿಸೆಂಬರ್ | | | | | | | | | | | |
| ಜನವರಿ | | | | | | | | | | | |
| ಫೆಬ್ರವರಿ | | | | | | | | | | | |
| ಮಾರ್ಚ್ | | | | | | | | | | | |
| ಏಪ್ರಿಲ್ | | | | | | | | | | | |

## 2. ಪಾಠ ಟಿಪ್ಪಣಿ ನಮೂನೆ

ತರಗತಿ : ____________________ ವಿಷಯ : ____________________

ಪಾಠದ ಹೆಸರು : ____________________ ಸಾಮರ್ಥ್ಯ / ಕಲಿಕಾಂಶ ____________

| ಚಟುವಟಿಕೆಯ ಹಂತಗಳು | ಕಲಿಕೆಯ ಸಾಮಗ್ರಿಗಳು | ಕಲಿಕೆಯ ಅಂಶಗಳು | ಬೋಧನಾ ವಿಧಾನ / ಕಲಿಕಾ ಚಟುವಟಿಕೆಗಳು | ದಿನಾಂಕ |
|---|---|---|---|---|
| | | | | |

ಮುಖ್ಯ ಶಿಕ್ಷಕರ ಸಹಿ ಶಿಕ್ಷಕರ ಸಹಿ

## 3. ಸಹಪಠ್ಯ ವಿಷಯಗಳ ವಿವರ ಮತ್ತು ಮೌಲ್ಯಮಾಪನ ವಹಿ

ಶೈಕ್ಷಣಿಕ ವರ್ಷ : ____________________ ತರಗತಿ :

| ಹಾಜರಿ ಸಂಖ್ಯೆ | ವಿದ್ಯಾರ್ಥಿಯ ಹೆಸರು | ಯೋಜನೆಗೆ ನೀಡಿದ ವಿಷಯ | ಗಳಿಸಿದ ಶ್ರೇಣಿ | ಕಾರ್ಯಾನುಭವ / ಕಲೆ / ಸೃಜನಾತ್ಮಕ ಅಭಿವ್ಯಕ್ತಿಯ ವಿವರ | ಗಳಿಸಿದ ಶ್ರೇಣಿ |
|---|---|---|---|---|---|
| | | | | | |

ಮುಖ್ಯಶಿಕ್ಷಕರ ಸಹಿ ಶಿಕ್ಷಕರ ಸಹಿ

# 4. ಶಿಕ್ಷಕರ ವೈಯಕ್ತಿಕ ಅಂಕ ವಹಿ

ಶಿಕ್ಷಕರ ಹೆಸರು : ತರಗತಿ : ವಿಷಯ : ವರ್ಷ :

| ಕ್ರ.ಸಂ. | ದಾಖಲಾತಿ ಸಂಖ್ಯೆ | ವಿದ್ಯಾರ್ಥಿಗಳ ಹೆಸರು | ಕಿರು ಪರೀಕ್ಷೆ–1 | ಕಿರು ಪರೀಕ್ಷೆ–2 | ಕಿರು ಪರೀಕ್ಷೆ–3 | ಕಿರು ಪರೀಕ್ಷೆ–4 | ಅರ್ಧವಾರ್ಷಿಕ ಪರೀಕ್ಷೆ | ವಾರ್ಷಿಕ ಪರೀಕ್ಷೆ | ಷರಾ |
|---|---|---|---|---|---|---|---|---|---|
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |

ಮುಖ್ಯಶಿಕ್ಷಕರ ಸಹಿ ಶಿಕ್ಷಕರ ಸಹಿ

ಸಾರ್ವಜನಿಕ ಶಿಕ್ಷಣ ಇಲಾಖೆ

ಹಾಜರಿ ಸಂಖ್ಯೆ : ........

# 5. ಪ್ರಗತಿ ಪತ್ರ

**201...... – 201......**

ವಿದ್ಯಾರ್ಥಿಯ ಹೆಸರು : ______________________

ತರಗತಿ : ______________________

ದಾಖಲಾತಿ ಸಂಖ್ಯೆ : ______________________

ತಾಯಿಯ ಹೆಸರು : ______________________

ತಂದೆಯ ಹೆಸರು : ______________________

ಶಾಲಾ ವಿಳಾಸ : ______________________

______________________

______________________

| ಕ್ರಮ ಸಂಖ್ಯೆ | ವಿಷಯ | ಗರಿಷ್ಠ ಅಂಕಗಳು | ಕನಿಷ್ಠ ಅಂಕಗಳು | 1ನೆಯ ಕಿರು ಪರೀಕ್ಷೆ | 2ನೆಯ ಕಿರು ಪರೀಕ್ಷೆ | ಅರ್ಧ ವಾರ್ಷಿಕ ಪರೀಕ್ಷೆ | 3ನೆಯ ಕಿರು ಪರೀಕ್ಷೆ | 4ನೆಯ ಕಿರು ಪರೀಕ್ಷೆ | ವಾರ್ಷಿಕ ಪರೀಕ್ಷೆ |
|---|---|---|---|---|---|---|---|---|---|
| 1. | ಪ್ರಥಮ ಭಾಷೆ | 125 | 44 | | | | | | |
| 2. | ದ್ವಿತೀಯ ಭಾಷೆ | 100 | 35 | | | | | | |
| 3. | ತೃತೀಯ ಭಾಷೆ | 100 | 35 | | | | | | |
| 4. | ಗಣಿತ | 100 | 35 | | | | | | |
| 5. | ವಿಜ್ಞಾನ | 100 | 35 | | | | | | |
| 6. | ಸಮಾಜ ವಿಜ್ಞಾನ | 100 | 35 | | | | | | |
| 7. | ದೈಹಿಕ ಶಿಕ್ಷಣ | 100 | 35 | | | | | | |
| | ಒಟ್ಟು | 725 | 254 | | | | | | |
| 8. | ಯೋಜನೆ | | ಡಿ | | | | | | |
| 9. | ಕಾರ್ಯಾನುಭವ/ಕಲೆ ಮತ್ತು ಸೃಜನಾತ್ಮಕ ಅಭಿವ್ಯಕ್ತಿ | | ಡಿ | | | | | | |
| 10. | ಹಾಜರಾತಿ | | | | | | | | |
| | ಶಾಲೆಗೆ ಹಾಜರಾದ ದಿನಗಳು | | | | | | | | |
| | ಶಾಲೆ ನಡೆದ ದಿನಗಳು | | | | | | | | |
| 11. | ತರಗತಿ ಶಿಕ್ಷಕರ ಸಹಿ | | | | | | | | |
| 12. | ಮುಖ್ಯ ಶಿಕ್ಷಕರ ಸಹಿ | | | | | | | | |
| 13. | ಪೋಷಕರ ಸಹಿ | | | | | | | | |

## ವಿದ್ಯಾರ್ಥಿಗೆ ಶಿಕ್ಷಕರು ನೀಡುವ ಸೂಚನೆಗಳು

| | | |
|---|---|---|
| 1. | 1 ನೆಯ ಕಿರುಪರೀಕ್ಷೆ | |
| 2. | 2 ನೆಯ ಕಿರುಪರೀಕ್ಷೆ | |
| 3. | ಅರ್ಧವಾರ್ಷಿಕ ಪರೀಕ್ಷೆ | |
| 4. | 3 ನೆಯ ಕಿರುಪರೀಕ್ಷೆ | |
| 5. | 4 ನೆಯ ಕಿರುಪರೀಕ್ಷೆ | |
| 6. | ವಾರ್ಷಿಕ ಪರೀಕ್ಷೆ | |

# 6. ಕ್ರೋಢೀಕೃತ ಅಂಕ ವಹಿ

ಶೈಕ್ಷಣಿಕ ವರ್ಷ ತರಗತಿ ಶಾಲೆ ನಡೆದ ದಿನಗಳು

| ಹಾಜರಿ ಸಂಖ್ಯೆ | ದಾಖಲಾತಿ ಸಂಖ್ಯೆ | ವಿದ್ಯಾರ್ಥಿಗಳ ಹೆಸರು | ಕಿರುಪರೀಕ್ಷೆ–1 | | | | | | | | | ಕಿರುಪರೀಕ್ಷೆ–2 | | | | | | | | | ಕಿರುಪರೀಕ್ಷೆ–3 | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | ಪ್ರಥಮ ಭಾಷೆ | ದ್ವಿತೀಯ ಭಾಷೆ | ತೃತೀಯ ಭಾಷೆ | ಗಣಿತ | ವಿಜ್ಞಾನ | ಸಮಾಜ ವಿಜ್ಞಾನ | ದೈಹಿಕ ಶಿಕ್ಷಣ | ಒಟ್ಟು ಅಂಕಗಳು | ಕಾರ್ಯಾನುಭವ / ಕಲೆ ಸೃಜನಾತ್ಮಕ ಚಟುವಟಿಕೆ | ಪ್ರಥಮ ಭಾಷೆ | ದ್ವಿತೀಯ ಭಾಷೆ | ತೃತೀಯ ಭಾಷೆ | ಗಣಿತ | ವಿಜ್ಞಾನ | ಸಮಾಜ ವಿಜ್ಞಾನ | ದೈಹಿಕ ಶಿಕ್ಷಣ | ಒಟ್ಟು ಅಂಕಗಳು | ಕಾರ್ಯಾನುಭವ / ಕಲೆ ಸೃಜನಾತ್ಮಕ ಚಟುವಟಿಕೆ | ಪ್ರಥಮ ಭಾಷೆ | ದ್ವಿತೀಯ ಭಾಷೆ | ತೃತೀಯ ಭಾಷೆ | ಗಣಿತ | ವಿಜ್ಞಾನ | ಸಮಾಜ ವಿಜ್ಞಾನ | ದೈಹಿಕ ಶಿಕ್ಷಣ | ಒಟ್ಟು ಅಂಕಗಳು | ಕಾರ್ಯಾನುಭವ / ಕಲೆ ಸೃಜನಾತ್ಮಕ ಚಟುವಟಿಕೆ |
| | | | | | | | | | | | | | | | | | | | | | | | | | | | | | |

| | | |
|---|---|---|
| ಕಿರುಪರೀಕ್ಷೆ-4 | ಪ್ರಥಮ ಭಾಷೆ | |
| | ದ್ವಿತೀಯ ಭಾಷೆ | |
| | ತೃತೀಯ ಭಾಷೆ | |
| | ಗಣಿತ | |
| | ವಿಜ್ಞಾನ | |
| | ಸಮಾಜ ವಿಜ್ಞಾನ | |
| | ದೈಹಿಕ ಶಿಕ್ಷಣ | |
| | ಒಟ್ಟು ಅಂಕಗಳು | |
| | ಕಾರ್ಯಾನುಭವ / ಕಲೆ ಸೃಜನಾತ್ಮಕ ಅಭಿವ್ಯಕ್ತಿ | |
| ಅರ್ಧವಾರ್ಷಿಕ ಪರೀಕ್ಷೆ | ಪ್ರಥಮ ಭಾಷೆ | |
| | ದ್ವಿತೀಯ ಭಾಷೆ | |
| | ತೃತೀಯ ಭಾಷೆ | |
| | ಗಣಿತ | |
| | ವಿಜ್ಞಾನ | |
| | ಸಮಾಜ ವಿಜ್ಞಾನ | |
| | ದೈಹಿಕ ಶಿಕ್ಷಣ | |
| | ಒಟ್ಟು ಅಂಕಗಳು | |
| | ಯೋಜನೆ | |
| | ಕಾರ್ಯಾನುಭವ / ಕಲೆ ಸೃಜನಾತ್ಮಕ ಅಭಿವ್ಯಕ್ತಿ | |
| ವಾರ್ಷಿಕ ಪರೀಕ್ಷೆ | ಪ್ರಥಮ ಭಾಷೆ | |
| | ದ್ವಿತೀಯ ಭಾಷೆ | |
| | ತೃತೀಯ ಭಾಷೆ | |
| | ಗಣಿತ | |
| | ವಿಜ್ಞಾನ | |
| | ಸಮಾಜ ವಿಜ್ಞಾನ | |
| | ದೈಹಿಕ ಶಿಕ್ಷಣ | |
| | ಒಟ್ಟು ಅಂಕಗಳು | |
| | ಯೋಜನೆ | |
| | ಕಾರ್ಯಾನುಭವ / ಕಲೆ ಸೃಜನಾತ್ಮಕ ಅಭಿವ್ಯಕ್ತಿ | |